# ಮೈಸೂರು ವಿಶ್ವವಿದ್ಯಾನಿಲಯ

**ಮೈಸೂರು ವಿಶ್ವವಿದ್ಯಾನಿಲಯ ಕ್ರಾಫರ್ಡ್ ಭವನದ ಸಿಂಡಿಕೇಟ್ ಸಭಾಂಗಣದಲ್ಲಿ ದಿನಾಂಕ: 11-07-2022 ರಂದು ಪೂರ್ವಾಹ್ನ 11.30 ಗಂಟೆಗೆ ನಡೆದ "ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆ"ಯ ನಡವಳಿಗಳು.**

**ಹಾಜರಿದ್ದ ಸದಸ್ಯರುಗಳು:**

| | | |
|---|---|---|
| 1. | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2. | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಡಾ. ಎಂ.ಎಸ್.ಗಿರಿಧರ ರಾವ್ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3. | ಪ್ರೊ. ಜಿ.ವೆಂಕಟೇಶ್ ಕುಮಾರ್ | ಸದಸ್ಯರು |
| 4. | ಪ್ರೊ. ಹೆಚ್.ರಾಜಶೇಖರ್ | |
| 5. | ಶ್ರೀ ಎಂ.ಬಿ. ಗಪ್ಪಣ್ಣ | ಸದಸ್ಯರು |
| 6. | ಡಾ. ಚೈತ್ರ ನಾರಾಯಣ | ಸದಸ್ಯರು |
| 7. | ಡಾ. ವೆಂಕಟೇಶಯ್ಯ | ಸದಸ್ಯರು |
| 8. | ಡಾ. ನಾಗರಾಜು | ಸದಸ್ಯರು |
| 9. | ಡಾ. ಜಿ.ಗೋವಿಂದರಾಜು | ಸದಸ್ಯರು |
| 10. | ಡಾ. ಕೆ.ವಿ.ಸುರೇಶ | ಸದಸ್ಯರು |
| 11. | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ | ಸದಸ್ಯರು |
| 12. | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 13. | ಶ್ರೀಮತಿ ವೈ.ಕೆ.ಪವಿತ್ರ | ಸದಸ್ಯರು |
| 14. | ಡಾ. ಈ.ಸಿ.ನಿಂಗರಾಜ್ ಗೌಡ | ಸದಸ್ಯರು |
| 15. | ಡಾ. ಎಂ.ಎಸ್.ದಾಮೋಧರ | ಸದಸ್ಯರು |
| 16. | ಡಾ. ಸೈಯದ್ ಕಾರ್ಝು ಮೊಹಿದ್ದೀನ್ (ವರ್ಚುವಲ್ ಮುಖಾಂತರ) | ಸದಸ್ಯರು |
| 17. | ಪ್ರೊ. ಎ.ಪಿ.ಜ್ಞಾನ ಪ್ರಕಾಶ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 18. | ಪ್ರೊ. ಆರ್.ಶಿವಪ್ಪ | ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ |
| 19. | ಡಾ. ಸಂಗೀತಾ ಗಜಾನನ್ ಭಟ್, ಹಣಕಾಸು ಅಧಿಕಾರಿಗಳು | ವಿಶೇಷ ಆಹ್ವಾನಿತರು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಸಭೆಗೆ ಹಾಜರಿದ್ದ ಸದಸ್ಯರುಗಳನ್ನು ಹೃತ್ಪೂರ್ವಕವಾಗಿ ಸಭೆಗೆ ಸ್ವಾಗತಿಸಿದರು.

ಮೊದಲಿಗೆ, ಹೊಸದಾಗಿ ಸಿಂಡಿಕೇಟ್ ಸದಸ್ಯರಾಗಿರುವ ಡಾ. ಎಂ.ಎಸ್.ಗಿರಿಧರ ರಾವ್, ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಇವರನ್ನು ಸ್ವಾಗತಿಸಲಾಯಿತು.

ಹಾಗೂ

ಡಾ. ಕೆ.ಸಿ.ವೀರಭದ್ರಯ್ಯ, ಜಂಟಿ ನಿರ್ದೇಶಕರು, ಪ್ರಾದೇಶಿಕ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಮೈಸೂರು ಇವರ ಸೇವೆಯನ್ನು ಸ್ಮರಿಸಿ ದಾಖಲಿಸಲಾಯಿತು.

| **ವಿಷಯ ಸಂಖ್ಯೆ** | **ವಿಷಯ ಸಂಕ್ಷಿಪ್ತವಾಗಿ** |
|---|---|
| ದಿನಾಂಕ: 30-04-2022ರಂದು ಜರುಗಿದ "ನಾಲ್ಕನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸುವ ಬಗ್ಗೆ. | |
| ದಿನಾಂಕ: 30-04-2022ರಂದು ಜರುಗಿದ "ನಾಲ್ಕನೇ ಸಾಮಾನ್ಯ ಸಿಂಡಿಕೇಟಿನ ಸಭೆ"ಯ ನಡವಳಿಯನ್ನು ದೃಢೀಕರಿಸಲಾಯಿತು. | |

| | |
|---|---|
| **ಸಾಮಾನ್ಯ ಸಭೆ 2022/5.1** | ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೋಟಾದಡಿ ಪ್ರವೇಶಾತಿ ನೀಡಿರುವ ಬಗ್ಗೆ. |
| **ತೀರ್ಮಾನ** | 2021-22ನೇ ಶೈಕ್ಷಣಿಕ ಸಾಲಿನಿಂದ ಅನ್ವಯಿಸುವಂತೆ ಸ್ನಾತಕೋತ್ತರ ಕೋರ್ಸುಗಳ ಪ್ರವೇಶಾತಿಯಲ್ಲಿ ವಿಶ್ವವಿದ್ಯಾನಿಲಯದ ವಿವಿಧ ವಿಭಾಗದಲ್ಲಿರುವ ಪ್ರತಿ ಕೋರ್ಸಿಗೂ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಕೋಟಾದಡಿಯಲ್ಲಿ ಒಂದು ಸೀಟನ್ನು ಮೀಸಲಿಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.2** | ಡಾ. ಶಿವಬಸವಯ್ಯ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಮಾನತ್ತಿನ ಅವಧಿಯ ಬಗ್ಗೆ. |
| | ಡಾ. ಶಿವಬಸವಯ್ಯ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ದಿನಾಂಕ: 08.03.2011ರಿಂದ 16.10.2011 ರವರೆಗಿನ ಅಮಾನತ್ತಿನ ಅವಧಿಯನ್ನು ನಿಯಮಾನುಸಾರ ಏನೆಂದು ಪರಿಗಣಿಸಬೇಕೆಂದು ಆಡಳಿತಾತ್ಮಕ ಆದೇಶ ನೀಡಬೇಕೆಂದು ಹಣಕಾಸು ಅಧಿಕಾರಿಯವರು ಕೋರಿರುತ್ತಾರೆ.<br><br>ಡಾ. ಚೈತ್ರ ನಾರಾಯಣ ಮಾತನಾಡಿ, ದಿನಾಂಕ: 08.03.2011ರಿಂದ 16.10.2011 ರವರೆಗೂ ಪ್ರೊ. ಶಿವಬಸವಯ್ಯರವರ ಅಮಾನತ್ತಿನ ಅವಧಿಯಾಗಿರುವುದರಿಂದ ಗಂಭೀರವಾದ ವಿಷಯವಾಗಿರುತ್ತದೆ. ಆದುದರಿಂದ ತೀರ್ಮಾನ ತೆಗೆದುಕೊಳ್ಳ-ಬೇಕಾದರೆ ಮರುಪರಿಶೀಲಿಸುವುದು ಸೂಕ್ತವೆಂದು ತಿಳಿಸಿದರು.<br><br>ಡಾ. ಶಿವಬಸವಯ್ಯ ಇವರು ವಯೋನಿವೃತ್ತರಾಗಿದ್ದು, ಇವರ ಹಕ್ಕಿನಲ್ಲಿ ಯಾವುದೇ ರೀತಿಯ ರಜೆಯಿಲ್ಲದಿದ್ದರೆ ಯಾವ ರಜೆಯೆಂದು ಪರಿಗಣಿಸುವುದು ಮತ್ತು ಇವರ ಅಮಾನತ್ತಿನ ರಜೆಯನ್ನು ಅಸಾಧಾರಣ ರಜೆಯೆಂದು ಪರಿಗಣಿಸಲು ಕಾನೂನಿನಲ್ಲಿ ಅವಕಾಶವಿದ್ದರೆ ಪ್ರಾಧಿಕಾರವು ಅನುಮತಿ ನೀಡಬಹುದೆಂದು ಶ್ರೀ ಎಸ್.ಡಿ.ದೊಡ್ಡಚಾರಿ ಮತ್ತು ಡಾ. ಎಂ.ಎಸ್.ದಾಮೋದರ ಅವರುಗಳು ತಿಳಿಸಿದರು. |

| | |
|---|---|
| | ಮಾನ್ಯ ಕುಲಪತಿಗಳು ಮಾತನಾಡಿ, ಪ್ರೊ. ಶಿವಬಸವಯ್ಯ ಅವರ ಆರೋಪವು ಸಾಬೀತಾಗಿದ್ದ ಹಿನ್ನೆಲೆಯಲ್ಲಿ ಹಾಲಿ ಪ್ರಾಧ್ಯಾಪಕ ಹುದ್ದೆಯಲ್ಲಿ ಪಡೆಯುತ್ತಿದ್ದ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಇಳಸುವ (ರೂ.40890/- + 10,000/- ಐಜಿಪಿ) ದಂಡನೆಯನ್ನು ವಿಧಿಸಿ, ಸದರಿಯವರನ್ನು ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ಸಂಯೋಜನಾಧಿಕಾರಿಯಾಗಿ ಮೂರು ವರ್ಷಗಳ ಅವಧಿಗೆ ನಿಯುಕ್ತಿಗೊಳಸಲಾಯಿತು. ತದನಂತರ, ಪ್ರೊ. ಶಿವಬಸವಯ್ಯ ಅವರಿಗೆ ವಿಧಿಸಲಾಗಿದ್ದ ದಂಡನೆಯನ್ನು ಮಾರ್ಪಡಿಸಿ, 03 ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯಲು ದಿನಾಂಕ: 31-12-2020ರಂದು ಆದೇಶ ಹೊರಡಿಸಲಾಗಿದೆ ಹಾಗೂ ಕಾನೂನು ಸಲಹೆಗಾರರು ನೀಡಿರುವ ಅಭಿಪ್ರಾಯದಲ್ಲಿ ಉದ್ಯೋಗಿಯನ್ನು ಅಮಾನತ್ತಿನಲ್ಲಿಟ್ಟಿದ್ದ ಅವಧಿಯ ಬಗ್ಗೆ ನಿರ್ಧಾರವನ್ನು ಸದರಿ ಉದ್ಯೋಗಿಯನ್ನು ಅಮಾನತ್ತು ಮಾಡಿದ ಪ್ರಾಧಿಕಾರ ನಿರ್ಧಾರ ತೆಗೆದುಕೊಳ್ಳಬೇಕೆಂದು ತಿಳಸಿರುವುದರಿಂದ ಮತ್ತು ದಿನಾಂಕ: 08.03.2011 ರಿಂದ 16.10.2011 ರವರೆಗಿನ ಅಮಾನತ್ತಿನ ಅವಧಿಯನ್ನು ಅಸಾಧಾರಣ ರಜೆಯೆಂದು ಪರಿಗಣಿಸಲು ಕಾನೂನಿನಲ್ಲಿ ಅವಕಾಶವಿರುತ್ತದೆಂದು ತಿಳಸಿದರು. |
| **ತೀರ್ಮಾನ** | ಡಾ. ಶಿವಬಸವಯ್ಯ, ನಿವೃತ್ತ ಪ್ರಾಧ್ಯಾಪಕರು, ಪ್ರಾಣಿಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ದಿನಾಂಕ: 08.03.2011 ರಿಂದ 16.10.2011 ರವರೆಗಿನ ಅಮಾನತ್ತಿನ ಅವಧಿಯನ್ನು ಏನೆಂದು ಪರಿಗಣಿಸಬೇಕೆಂದು ಎಂಬುದರ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಭೆಯು ಪ್ರೊ. ಶಿವಬಸವಯ್ಯ ಅವರು ಈಗಾಗಲೇ ವಯೋನಿವೃತ್ತಿ ಹೊಂದಿದ್ದು, ಸದರಿಯವರ ಆರೋಪವು ಸಾಬೀತಾಗಿದ್ದ ಹಿನ್ನೆಲೆಯಲ್ಲಿ ಹಾಲಿ ಪ್ರಾಧ್ಯಾಪಕ ಹುದ್ದೆಯಲ್ಲಿ ಪಡೆಯುತ್ತಿದ್ದ ವೇತನ ಶ್ರೇಣಿಯ ಕನಿಷ್ಠ ಹಂತಕ್ಕೆ ಇಳಸುವ (ರೂ.40890/- + 10,000/- ಐಜಿಪಿ) ದಂಡನೆಯನ್ನು ವಿಧಿಸಿ, ಸದರಿಯವರನ್ನು ಸ್ನಾತಕೋತ್ತರ ಕೇಂದ್ರ, ಚಾಮರಾಜನಗರಕ್ಕೆ ಸಂಯೋಜನಾಧಿಕಾರಿಯಾಗಿ ಮೂರು ವರ್ಷಗಳ ಅವಧಿಗೆ ನಿಯುಕ್ತಿಗೊಳಸಲಾಯಿತು. ತದನಂತರ, ಪ್ರೊ. ಶಿವಬಸವಯ್ಯ ಅವರಿಗೆ ವಿಧಿಸಲಾಗಿದ್ದ ದಂಡನೆಯನ್ನು ಮಾರ್ಪಡಿಸಿ, 03 ವಾರ್ಷಿಕ ವೇತನ ಬಡ್ತಿಗಳನ್ನು ತಡೆಹಿಡಿಯಲು ದಿನಾಂಕ: 31-12-2020ರಂದು ಆದೇಶ ಹೊರಡಿಸಲಾಗಿದೆ. ಆದುದರಿಂದ, ದಿನಾಂಕ: 08.03.2011 ರಿಂದ 16.10.2011 ರವರೆಗೂ ಪ್ರೊ. ಶಿವಬಸವಯ್ಯರವರ ಅಮಾನತ್ತಿನ ಅವಧಿಯನ್ನು ಅಸಾಧಾರಣ ರಜೆಯೆಂದು ಪರಿಗಣಿಸಿ, ಸದರಿಯವರ ಪ್ರಕರಣವನ್ನು ಮುಕ್ತಾಯ-ಗೊಳಸಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.3** | ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ ಹಾಗೂ ಲೈಸನ್ಸ್ ಶುಲ್ಕ ನಿಗಧಿಪಡಿಸುವ ಸಂಬಂಧದ ಮಾರ್ಗಸೂಚಿ ರಚಿಸುವ ಬಗ್ಗೆ. |
| **ತೀರ್ಮಾನ** | ಸಿಂಡಿಕೇಟ್ ಉಪ ಸಮಿತಿಯ ಶಿಫಾರಸ್ಸಿನನ್ವಯ ಮೈಸೂರು ವಿಶ್ವವಿದ್ಯಾನಿಲಯದ ವಸತಿಗೃಹಗಳ ಹಂಚಿಕೆ ಹಾಗೂ ಲೈಸನ್ಸ್ ಶುಲ್ಕ ನಿಗಧಿಪಡಿಸುವ ಸಂಬಂಧ ಪರಿಷ್ಕರಿಸಿರುವ ಮಾರ್ಗಸೂಚಿಯನ್ನು ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೊಳಸಲು ಹಾಗೂ ಶೇ.20 ರಷ್ಟು ವಸತಿಗೃಹಗಳನ್ನು ಮಾನ್ಯ ಕುಲಪತಿಯವರ ವಿವೇಚಾನುಸಾರ ಹಂಚಿಕೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.4** | Computer Science and Information Technology (UG & PG) ಮತ್ತು Business Administration and Commerce (UG & PG) ವಿಷಯಗಳಲ್ಲಿ |

| | |
|---|---|
| | (Online Programme) ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| **ತೀರ್ಮಾನ** | ನಿರ್ದೇಶಕರು, ಆನ್‌ಲೈನ್ ಪ್ರೋಗ್ರಾಂ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು Online Programme ಅಡಿಯಲ್ಲಿ Computer Science and Information Technology (UG & PG) ಮತ್ತು Business Administration and Commerce (UG & PG) ಕೋರ್ಸುಗಳನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವುದರಿಂದ ಸಿಂಡಿಕೇಟ್ ಅನುಮೋದನೆಯನ್ನು ಕಾಯ್ದಿರಿಸಿ, ದಿನಾಂಕ: 04-05-2022ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.5** | ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿದ್ದ ಬಗ್ಗೆ ಅನುಸಮರ್ಥನೆಗಾಗಿ. |
| **ತೀರ್ಮಾನ** | ಡಾ. ಸುಧಾ ಬಿ.ಎಸ್., ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಯುವರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರಿಗೆ ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ತಮ್ಮ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.6** | ಮೈಸೂರು ವಿಶ್ವವಿದ್ಯಾನಿಲಯದ "ಸ್ನಾತಕೋತ್ತರ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆಯುವ ಹಾಗೂ ಯಾವುದೇ ರೀತಿಯ ಶಿಷ್ಯವೇತನ ಪಡೆಯದೇ ಇರುವ ವಿದ್ಯಾರ್ಥಿಗಳಿಗೆ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನಾ ಶಿಷ್ಯವೇತನ (MURF)" ನೀಡುವುದರ ಬಗ್ಗೆ. |
| **ತೀರ್ಮಾನ** | ಪ್ರಸಕ್ತ ಸಾಲಿನಿಂದ ಮೈಸೂರು ವಿಶ್ವವಿದ್ಯಾನಿಲಯದ ಅಧೀನಕ್ಕೊಳಪಡುವ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳು/ಸ್ನಾತಕೋತ್ತರ ಕೇಂದ್ರಗಳು/ ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಲ್ಲಿ ಸ್ನಾತಕೋತ್ತರ ಪದವಿಯ ಎಲ್ಲಾ ಕೋರ್ಸುಗಳಲ್ಲಿ ಪ್ರಥಮ/ದ್ವಿತೀಯ ರ್‍ಯಾಂಕ್ ಪಡೆಯುವ ಹಾಗೂ ಯಾವುದೇ ರೀತಿಯ ಶಿಷ್ಯವೇತನ ಪಡೆಯದೇ ಇರುವ ವಿದ್ಯಾರ್ಥಿಗಳಿಗೆ ಕೋರ್ಸಿಗೆ ಒಬ್ಬರಂತೆ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧನಾ ಶಿಷ್ಯವೇತನ (MURF)" ನೀಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.7** | "ಬೌದ್ಧ ಅಧ್ಯಯನ ಕೇಂದ್ರ"ವನ್ನು ಸ್ಥಾಪಿಸುವುದರ ಬಗ್ಗೆ. |
| **ತೀರ್ಮಾನ** | ಮುಂದೂಡಲಾಯಿತು. |

| ಸಾಮಾನ್ಯ ಸಭೆ 2022/5.8 | ವಿಶ್ವವಿದ್ಯಾನಿಲಯದ ಈಜುಕೊಳದ ಪ್ರವೇಶ ದರವನ್ನು ಪರಿಷ್ಕರಿಸುವ ಬಗೆಗೆ. |
|---|---|

ಈಜುಕೊಳದ ನಿರ್ವಹಣೆಯ ವೆಚ್ಚವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಈಜುಕೊಳದ ಪ್ರವೇಶಕ್ಕೆ ಸಂಬಂಧಿಸಿದಂತೆ ಹಾಲಿ ನಿಗದಿಪಡಿಸಿರುವ ಈಜುಕೊಳದ ದರಗಳನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

**1. ಪ್ರವೇಶ ದರ (ಪ್ರತಿ ಬ್ಯಾಚಿನ ಒಬ್ಬರಿಗೆ) :**

| ಕ್ರ.ಸಂ. | ವಿವರ | ಹಾಲಿ ದರ (ರೂ.) | ಸೂಚಿತ ಹೊಸ ದರ ಶೇ/.18ರಷ್ಟು ಜಿ.ಎಸ್.ಟಿ. ಸೇರಿ(ರೂ.) |
|---|---|---|---|
| 01 | 02 | 03 | 04 |
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 60=00 | No Changes |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | 40=00 | No Changes |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | 30=00 | No Changes |

**2. ಮಾಸಿಕ ಶುಲ್ಕ ಒಬ್ಬರಿಗೆ ಪ್ರತಿ ಬ್ಯಾಚಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 1,000=00 | No Changes |
| 2 | 12 ವರ್ಷ ಒಳಪಟ್ಟ ಸಾರ್ವಜನಿಕ ಮಕ್ಕಳಿಗೆ | 600=00 | No Changes |
| 3 | ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳಿಗೆ | 500=00 | No Changes |
| 4 | ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ/ಉದ್ಯೋಗಿಗಳ ಪತ್ನಿ ಮತ್ತು ಮಕ್ಕಳಿಗೆ (ಇಬ್ಬರಿಗೆ ಸೀಮಿತ) | 350=00 | **400=00** |
| 5 | ಕುಲಪತಿ /ಕುಲಸಚಿವರು/ ನಿರ್ದೇಶಕರು ಸೂಚಿಸುವವರಿಗೆ | 600=00 | **700=00** |
| 6 | ವಿಶ್ವವಿದ್ಯಾನಿಲಯದ ನಿವೃತ್ತ ನೌಕರರಿಗೆ | 500=00 | No Changes |
| 7 | ಹಿರಿಯ ನಾಗರಿಕರಿಗೆ/ಅಂಗವಿಕಲರಿಗೆ (ಶೇ.50 ಹೆಚ್ಚಿನ ಅಂಗವೈಕಲ್ಯ) | 500=00 | **600=00** |

**3. 06 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 4,500=00 | No Changes |

**4. 12 ತಿಂಗಳ ಒಂದು ಬ್ಯಾಚಿಗೆ ಒಬ್ಬರಿಗೆ**

| | | | |
|---|---|---|---|
| 1 | ಸಾರ್ವಜನಿಕರಿಗೆ (ವಯಸ್ಕರಿಗೆ) | 9,000=00 | No Changes |

**5. ವಾರ್ಷಿಕ ಶುಲ್ಕ ಈಜು ಸ್ಪರ್ಧೆಯಲ್ಲಿ ಭಾಗವಹಿಸುವವರಿಗೆ (12 ತಿಂಗಳಿಗೆ)**

| | | | |
|---|---|---|---|
| 1 | ಈಜು ಸ್ಪರ್ಧೆಯಲ್ಲಿ ಭಾಗವಹಿಸಲು ಆಯ್ಕೆಯಾಗಿರುವ ಮಕ್ಕಳಿಗೆ ಒಂದು ವರ್ಷಕ್ಕೆ ಒಬ್ಬರಿಗೆ (ಈಜು ತರಬೇತುದಾರರು/ಈಜು ಶಿಕ್ಷಕರು ದೃಢಿಕರಿಸಿದವರಿಗೆ ಈಜು ಸ್ಪರ್ಧಿಗಳ ಉತ್ತೇಜನ ದೃಷ್ಟಿಯಿಂದ) | 6,000=00 | **10,000=00 (ಶೇ/.18ರಷ್ಟು ಜಿ.ಎಸ್.ಟಿ. ಸೇರಿ)** |
| 2 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರಿಗೆ ಪ್ರತಿ ವರ್ಷ ಹಾಲಿ ದರದ ಮೇಲೆ ಶೇ.10ರಷ್ಟನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿ ಪಡಿಸಲು ಸೂಚಿಸಿದೆ. | | |

## 6. ಈಜು ಸ್ಪರ್ಧೆಗಳಿಗೆ (ಒಂದು ದಿನಕ್ಕೆ)

| | | | |
|---|---|---|---|
| 1 | ವಿಶ್ವವಿದ್ಯಾನಿಲಯವೇ ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | ಉಚಿತ | |
| 2 | ಸರ್ಕಾರದ ಇಲಾಖೆಗಳು / ಸರ್ಕಾರದ ಸಂಘ/ ಮೈಸೂರು ಜಿಲ್ಲಾ ಈಜು ಸಂಸ್ಥೆಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 4,000=00 +18% G.S.T. | **6,000=00 +18% G.S.T.** |
| 3 | ಖಾಸಗಿಯವರು ಈಜು ಸ್ಪರ್ಧೆಯನ್ನು ಏರ್ಪಡಿಸಿದರೆ | 7,000=00 +18% G.S.T. | **9,000=00 +18% G.S.T.** |
| 4 | ಚಲನಚಿತ್ರದವರು ಈಜುಕೊಳವನ್ನು ಚಿತ್ರೀಕರಣಕ್ಕೆ ಕೋರಿದರೆ | 75,000=00 +18% G.S.T. | No Changes |

## 7. ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ ಒಂದು ಬ್ಯಾಚಿಗೆ (21 ದಿನಗಳ ಅವಧಿಗೆ)

| | | | |
|---|---|---|---|
| 1 | ವಿಶೇಷ ಈಜು ತರಬೇತಿ ಶಿಬಿರಕ್ಕೆ ಒಬ್ಬರಿಗೆ (21 ದಿನಗಳ ಅವಧಿಗೆ) | 3,250=00 +18% G.S.T. | No Changes |
| 2 | ಪರಿಣಿತ ಈಜು ತರಬೇತಿ ಶಿಬಿರ Advance Camp (30 ದಿನಗಳ ಅವಧಿಗೆ) | 4,250=00 +18% G.S.T. | No Changes |
| 3 | ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ಇವರ ಸೂಚನೆಯಂತೆ ಪ್ರತಿ ವರ್ಷ ಹಾಲಿ ದರದ ಮೇಲೆ ರೂ.250=00ಗಳನ್ನು ಹೆಚ್ಚಿಸಿ ಹೊಸ ದರವನ್ನು ನಿಗದಿ ಪಡಿಸಲಾಗುವುದು. | | |

**ವಿಶೇಷ ಸೂಚನೆ:**

| | |
|---|---|
| 1 | 70 ಜನರಿರುವ ಒಂದು ತಂಡದ ವಿಶೇಷ ಈಜು ಶಿಬಿರದಲ್ಲಿ ಭಾಗವಹಿಸುವ ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಏಳು ಮಕ್ಕಳಿಗೆ ಪ್ರತಿಯೊಂದು ತಂಡಕ್ಕೂ ಮೊದಲು ನೊಂದಾವಣಿ ಮಾಡಿದವರಿಗೆ ಮೊದಲ ಆಧ್ಯತೆ ನೀಡುವುದರ ಆಧಾರದಲ್ಲಿ ನಿರ್ದೇಶಕರು ಪ್ರತಿ ವರ್ಷ ಸೂಚಿಸುವ ದರದಲ್ಲಿ ಅರ್ಧದಷ್ಟು ರಿಯಾಯಿತಿ ನೀಡಲಾಗುವುದು. |
| 2 | ವಿಶೇಷ ಈಜು ತರಬೇತಿ ಶಿಬಿರಕ್ಕೆ ಹೆಚ್ಚು ಬೇಡಿಕೆ ಬಂದಲ್ಲಿ, ಹತ್ತು ಮಂದಿ ಅಭ್ಯರ್ಥಿಗಳನ್ನು ಹೆಚ್ಚಿಸಿಕೊಳ್ಳಲು ನಿರ್ದೇಶಕರು, ದೈ.ಶಿ.ವಿ, ಇವರಿಗೆ ವಿವೇಚನಾಧಿಕಾರ ನೀಡಲಾಗಿದೆ. |
| 3 | ಈಜುಕೊಳಕ್ಕೆ ಯಾವುದೇ ರೀತಿಯಲ್ಲಿಯೂ ಹಾನಿಯಾಗದೆ ಈಜು ಸ್ಪರ್ಧೆ/ ಚಿತ್ರಿಕರಣ ನಡೆಸಬೇಕು, ಸಾಕಷ್ಟು ಮುಂಚಿತವಾಗಿ ವಿಶ್ವವಿದ್ಯಾನಿಲಯ ಅನುಮತಿ ಪಡೆಯಬೇಕು ಮತ್ತು ಯಾವುದೇ ಅನುಮತಿಯನ್ನು ರದ್ದು ಮಾಡುವ ಅಧಿಕಾರ ವಿಶ್ವವಿದ್ಯಾನಿಲಯಕ್ಕೆ ಇದೆ. |
| 4 | ಭಾನುವಾರ ಮತ್ತು ಸಾರ್ವತ್ರಿಕ ರಜೆ ದಿನಗಳಲ್ಲಿ ಈಜುಕೊಳಕ್ಕೆ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಲಾಗಿದೆ. |
| 5 | ಸಾರ್ವಜನಿಕರ ಬ್ಯಾಚ್ ಸಮಯವು ಕೆಳಕಂಡಂತೆ ಇದೆ. |

| | | |
|---|---|---|
| 1. | ಬೆಳಗ್ಗೆ 06-30 ರಿಂದ 07-30 | ಜನರಲ್ ಬ್ಯಾಚ್ |
| 2. | ಬೆಳಗ್ಗೆ 07-30 ರಿಂದ 08-30 | ಜನರಲ್ ಬ್ಯಾಚ್ |
| 3. | ಬೆಳಗ್ಗೆ 08-30 ರಿಂದ 09-30 | ಜನರಲ್ ಬ್ಯಾಚ್ |
| 4. | ಮಧ್ಯಾಹ್ನ 03-00 ರಿಂದ 04-00 | ಪುರುಷರ ಬ್ಯಾಚ್ |
| 5. | ಮಧ್ಯಾಹ್ನ 04-00 ರಿಂದ 05-00 | ಮಹಿಳೆಯರ ಬ್ಯಾಚ್ |
| 6. | ಸಂಜೆ 05-00 ರಿಂದ 06-00 | ಜನರಲ್ ಬ್ಯಾಚ್ |
| 7. | ಸಂಜೆ 06-00 ರಿಂದ 07-00 | ಈಜು ತರಬೇತಿ ಶಿಬಿರ ಮತ್ತು ಸ್ಪರ್ಧಾಳು ಬ್ಯಾಚ್ |

| | |
|---|---|
| **ತೀರ್ಮಾನ** | ಮೈಸೂರು ವಿಶ್ವವಿದ್ಯಾನಿಲಯದ ಈಜುಕೊಳದ ನಿರ್ವಹಣೆಯ ವೆಚ್ಚವು ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಮೇಲ್ಕಂಡ ಪಟ್ಟಿಯಲ್ಲಿ ನಮೂದಿಸಿರುವಂತೆ ಕೆಲವು ದರಗಳನ್ನು ಪರಿಷ್ಕರಿಸಿದ್ದು, ಈ ಪರಿಷ್ಕೃತ ದರವು ವಿಶ್ವವಿದ್ಯಾನಿಲಯವು ಹೊರಡಿಸುವ ಆದೇಶದ ದಿನಾಂಕದಿಂದ ಜಾರಿಗೊಳಿಸಲು ಸಭೆಯು ಅನುಮೋದಿಸಿತು. |

| | |
|---|---|
| **ಸಾಮಾನ್ಯ ಸಭೆ 2022/5.9** | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು ಇವರು ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಕಾಮಗಾರಿಗಳ ಬಗೆಗಿನ ಮಾಹಿತಿಯನ್ನು ಸಿಂಡಿಕೇಟ್ ಸಭೆಯ ಮುಂದೆ ಮಂಡಿಸಲು ಕೋರಿರುವ ಬಗ್ಗೆ. |
| | ಶ್ರೀ ಆರ್. ಪ್ರದೀಪ್ ಕುಮಾರ್ ದೀಕ್ಷಿತ್ ಮಾತನಾಡಿ, ಚಾಮರಾಜನಗರ ಸ್ನಾತಕೋತ್ತರ ಕೇಂದ್ರದ ಅಭಿವೃದ್ಧಿ ಕಾಮಗಾರಿಗಳ ಬಗೆಗಿನ ಮಾಹಿತಿಯನ್ನು ಕೋರಿ 3-4 ತಿಂಗಳುಗಳಾಗಿರುತ್ತದೆ. ಆದರೆ, ಕಾಮಗಾರಿಗಳ ವಿವರವನ್ನು ಮಾತ್ರ ನೀಡಿದ್ದು, ಕಾಮಗಾರಿ ಕೈಗೊಂಡಿರುವ ಅವಧಿ ಹಾಗೂ ಖರ್ಚು-ವೆಚ್ಚದ ವಿವರವನ್ನು ಪೂರ್ಣವಾಗಿ ನೀಡಬೇಕೆಂದು ತಿಳಿಸಿದರು. |
| **ತೀರ್ಮಾನ** | ಚಾಮರಾಜನಗರ ಸ್ನಾತಕೋತ್ತರ ಕೇಂದ್ರದಲ್ಲಿ ಕೈಗೊಂಡಿರುವ ಪ್ರತಿ ಕಾಮಗಾರಿಯ ಅವಧಿ ಮತ್ತು ಖರ್ಚು-ವೆಚ್ಚದ ವಿವರಗಳನ್ನು ಪೂರ್ಣ ಪ್ರಮಾಣದಲ್ಲಿ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿದ ನಂತರ ಸಭೆಗೆ ಮಂಡಿಸಲು ತೀರ್ಮಾನಿಸಿ, ಸದರಿ ವಿಷಯವನ್ನು ಮುಂದೂಡಲಾಯಿತು. |
| **ಸಾಮಾನ್ಯ ಸಭೆ 2022/5.10** | ವಿಶ್ವವಿದ್ಯಾನಿಲಯದ Specialized Programme ನಡಿ ವಿವಿಧ ಕೋರ್ಸ್‌ಗಳನ್ನು ನಡೆಸಲು ಮಾನ್ಯತೆ ಪಡೆದಿರುವ Rathna College of Business Management (Jeevan Dharan Trust), ಮೈಸೂರು ಇವರು ವಿಳಾಸ ಬದಲಾವಣೆ ಕೋರಿದ್ದ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಯ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಶಿಫಾರಸ್ಸು ಪರಿಶೀಲಿಸಿದ ಸಭೆಯು Rathna College of Business Management (Jeevan Dharan Trust) ಸಂಸ್ಥೆಯ ವಿಳಾಸವನ್ನು #1783, 1ನೇ ಮಹಡಿ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಇಲ್ಲಿಂದ # ಜೆ.ಪಿ/2, 2ನೇ ಮಹಡಿ ಬಂದತಮ್ಮ ಕಾಂಪ್ಲೆಕ್ಸ್, ನ್ಯೂ ಕಾಂತರಾಜ್ ಅರಸ್ ರಸ್ತೆ, 'ಜೆ' ಬ್ಲಾಕ್, ಕುವೆಂಪುನಗರ, ಮೈಸೂರು ವಿಳಾಸಕ್ಕೆ ಬದಲಾವಣೆ ಮಾಡಿಕೊಳ್ಳಲು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.11** | ದಿವಂಗತ ಶ್ರೀ ಪಿ. ಉದಯಶಂಕರ್, ಪರಿಚಾರಕರು, ಯುವರಾಜ ಕಾಲೇಜು, ಮೈಸೂರು ಇವರ ಮಗನಾದ ಶ್ರೀ ಯು. ನವೀನ್ ಕುಮಾರ್ ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಶ್ರೀ ಪಿ. ಉದಯಶಂಕರ್, ಪರಿಚಾರಕರು, ಯುವರಾಜ ಕಾಲೇಜು, ಮೈಸೂರು ಇವರ ಮಗನಾದ ಶ್ರೀ ಯು. ನವೀನ್ ಕುಮಾರ್ ಇವರಿಗೆ ಅನುಕಂಪದ ಆಧಾರದ ಮೇಲೆ ದ್ವಿತೀಯ ದರ್ಜೆ ಗುಮಾಸ್ತರ ಹುದ್ದೆಯಲ್ಲಿ ನೇಮಕಾತಿ ಮಾಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.12** | ದಿವಂಗತ ಮಹದೇವ ನಾಯಕ, ತೋಟಗಾರ, ತೋಟಗಾರಿಕಾ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಮಗನಾದ ಶ್ರೀ ಚಂದ್ರಕುಮಾರ್ ಎಂ. ಅವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| | ಶ್ರೀ ಎಸ್.ಡಿ.ದೊಡ್ಡಚಾರಿ ಮಾತನಾಡಿ, ಶ್ರೀ ಚಂದ್ರಕುಮಾರ್.ಎಂ ಅವರು ಅಂಗವಿಕಲರಾಗಿದ್ದು, ಇವರು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಅಂಕವಿಕಲ ಪ್ರಮಾಣಪತ್ರವನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಹಾಗೂ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಸಂಬಂಧ ಅಂಗವಿಕಲ ಎಂಬ ಉದ್ದೇಶದಿಂದ |

| | |
|---|---|
| | ವಯೋಮಾನ ವಿನಾಯಿತಿ (Age relaxation) ನೀಡಿ ನೇಮಕಾತಿ ಮಾಡಿಕೊಳ್ಳಬೇಕಾಗಿರುವುದರಿಂದ ಹುಟ್ಟಿನಿಂದ ಅಂಗವಿಕಲರಾಗಿದ್ದರೇ ಮಾತ್ರ ಉದ್ಯೋಗ ನೀಡಬೇಕು. ಇಲ್ಲದಿದ್ದರೆ ವಯೋಮಾನ ವಿನಾಯಿತಿ ಆಧಾರದ ಮೇಲೆ ಉದ್ಯೋಗ ನೀಡುವುದಕ್ಕೆ ಸಭೆಯು ಒಪ್ಪಿಗೆ ಸೂಚಿಸುವುದಿಲ್ಲವೆಂದು ತಿಳಿಸಿದರು. |
| **ತೀರ್ಮಾನ** | ಶ್ರೀ ಚಂದ್ರಕುಮಾರ್.ಎಂ ಇವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಮುನ್ನ ಅಂಗವಿಕಲರೆಂದು ವಯೋಮಾನ ವಿನಾಯಿತಿ ನೀಡುತ್ತಿರುವುದರಿಂದ ಹುಟ್ಟಿನಿಂದಲೂ ಅಂಕವಿಕಲರೇ ಅಥವಾ ತದನಂತರದಲ್ಲಿ ಉದ್ಭವಿಸಿದ ಅಂಗವಿಕಲತೆಯೇ ಎಂದು ಪರಿಶೀಲಿಸಿದ ನಂತರ ಮುಂದಿನ ಸಭೆಗೆ ಸದರಿ ವಿಷಯವನ್ನು ಮಂಡಿಸಿ, ಸೂಕ್ತ ನಿರ್ಧಾರ ತೆಗೆದುಕೊಳ್ಳಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.13** | ದಿವಂಗತ ಲಕ್ಷ್ಮಣರಾವ್, ಸೇವಕ, ಸ್ನಾತಕ ಗ್ರಂಥಾಲ ಯ, ಮಹಾರಾಜ ಕಾಲೇಜು ಆವರಣ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಗುರುರಾವ್ ಅವರು ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡುವ ಬಗ್ಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯದ ಸೇವೆಯಲ್ಲಿರುವಾಗಲೇ ನಿಧನರಾದ ನೌಕರರ ಕುಟುಂಬದವರಿಗೆ ಅನುಕಂಪದ ಆಧಾರದ ಮೇಲೆ ಉದ್ಯೋಗ ನೀಡಲು ರಚಿಸಲಾಗಿರುವ ಅಧಿನಿಯಮಗಳ ಅನ್ವಯ ದಿವಂಗತ ಲಕ್ಷ್ಮಣರಾವ್, ಸೇವಕ, ಸ್ನಾತಕ ಗ್ರಂಥಾಲಯ, ಮಹಾರಾಜ ಕಾಲೇಜು ಆವರಣ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಮಗನಾದ ಶ್ರೀ ಗುರುರಾವ್ ಇವರಿಗೆ ಅನುಕಂಪದ ಆಧಾರದ ಮೇಲೆ ಪರಿಚಾರಕರ ಹುದ್ದೆಯಲ್ಲಿ ನೇಮಕಾತಿ ಮಾಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.14** | ಹದಿನಾಲ್ಕು ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿರುವ ಬಗ್ಗೆ- ಅನುಸಮರ್ಥನೆಗಾಗಿ. |
| **ತೀರ್ಮಾನ** | ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 33 (1) & (2)ರ ಪ್ರಕಾರ ರಚಿಸಲಾಗಿದ್ದ ಈ ಕೆಳಕಂಡ ವಿಷಯಗಳ ಅಧ್ಯಯನ ಮಂಡಳಿಗಳ ಮೂರು ವರ್ಷಗಳ ಅವಧಿಯು ಅಂತ್ಯಗೊಂಡಿರುವುದರಿಂದ ಸದರಿ ವಿಷಯಗಳ ಅಧ್ಯಯನ ಮಂಡಳಿಗಳನ್ನು ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ ಪುನರ್‌ರಚಿಸಿ ದಿನಾಂಕ: 27-04-2022ರಂದು ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು.<br>1. Foreign Languages (CB)<br>2. Comparative Literature and Translation (CB)<br>3. NSS and NCC (CB)<br>4. Visual Arts (CB )<br>5. Genetics and Genomics (PG)<br>6. Human Development and Family Studies (CB)<br>7. Information Technology and Multimedia CIST (PG)<br>8. Audiology (PG)<br>9. Speech-Language Pathology (PG) |

| | |
|---|---|
| | 10. Special Education (CB)<br>11. Assisted Reproductive Technology and Embryology (PG)<br>12. B.Sc (Hons) (Graphics & Animation) (UG)<br>13. BBA (Tourism and Air Travel) (UG)<br>14. BBA (Aviation Management (UG) |
| **ಸಾಮಾನ್ಯ ಸಭೆ 2022/5.15** | ಹಾಸನ ಸ್ನಾತಕೋತ್ತರ ಕೇಂದ್ರಕ್ಕೆ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ಪಿ.ಶರಣಪ್ಪ, ಪ್ರಾಧ್ಯಾಪಕರು, ಸ್ನಾತಕೋತ್ತರ ಕೇಂದ್ರ, ಹಾಸನ ಇವರನ್ನು ದಿನಾಂಕ: 27-07-2020 ರಿಂದ ಜಾರಿಗೆ ಬಂದಂತೆ ಹಾಸನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಲಾಗಿದ್ದು, ಇವರ ಅವಧಿಯು ದಿನಾಂಕ: 26-07-2022ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಹಾಸನ ಸ್ನಾತಕೋತ್ತರ ಕೇಂದ್ರದ ಪ್ರಾಧ್ಯಾಪಕರುಗಳ ಜೇಷ್ಠತೆಯನುಸಾರ ಪ್ರೊ. ಸಿ.ಇ.ಸುಜಾತ, ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ ಇವರು ಹಿರಿಯರಾಗಿರುತ್ತಾರೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಸಿ.ಇ.ಸುಜಾತ, ಪ್ರಾಧ್ಯಾಪಕರು, ಇಂಗ್ಲೀಷ್ ವಿಭಾಗ, ಸ್ನಾತಕೋತ್ತರ ಕೇಂದ್ರ, ಹಾಸನ ಇವರನ್ನು ದಿನಾಂಕ: 27-07-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಹಾಸನ ಸ್ನಾತಕೋತ್ತರ ಕೇಂದ್ರದ ನಿರ್ದೇಶಕರನ್ನಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.16** | ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಡಾ. ವಾಲೆಂಡಿನ್ ರಾಜೇಂದ್ರಕುಮಾರ್, ಸಹಾಯಕ ಪ್ರಾಧ್ಯಾಪಕರು, ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ: 29-08-2022ಕ್ಕೆ ಮುಕ್ತಾಯಗೊಳ್ಳುತ್ತಿದೆ.<br><br>ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯ ಪ್ರಕಾರ ಡಾ. ವಾಲೆಂಡಿನ್ ರಾಜೇಂದ್ರಕುಮಾರ್ ಇವರೊಬ್ಬರನ್ನು ಬಿಟ್ಟು ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗದಲ್ಲಿ ಬೇರೆ ಯಾರೂ ಖಾಯಂ ಪ್ರಾಧ್ಯಾಪಕರಾಗಲೀ / ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ವಾಲೆಂಡಿನ್ ರಾಜೇಂದ್ರಕುಮಾರ್, ಸಹಾಯಕ ಪ್ರಾಧ್ಯಾಪಕರು, ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 30-08-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಮತ್ತೆ ಕ್ರಿಶ್ಚಿಯಾನಿಟಿ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು. |

| | |
|---|---|
| **ಸಾಮಾನ್ಯ ಸಭೆ 2022/5.17** | ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರಸ್ತುತ ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗದಲ್ಲಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಗೋಪಾಲ್ ಮರಾಠೆ.ಕೆ, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಅಧ್ಯಕ್ಷರ ಅವಧಿಯು ದಿನಾಂಕ: 09-08-2022ಕ್ಕೆ ಮುಕ್ತಾಯಗೊಳ್ಳುತ್ತಿದೆ.<br><br>ಮಾಲಿಕ್ಯುಲರ್ ಬಯಾಲಜಿ ಅಧ್ಯಯನ ವಿಭಾಗಕ್ಕೆ ಪ್ರತ್ಯೇಕವಾಗಿ ಖಾಯಂ ಪ್ರಾಧ್ಯಾಪಕರಾಗಲೀ/ಸಹ ಪ್ರಾಧ್ಯಾಪಕರಾಗಲೀ ಇರುವುದಿಲ್ಲವೆಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು. ಆದ್ದರಿಂದ ಅಧ್ಯಯನ ವಿಭಾಗಕ್ಕೆ ಪ್ರಾಧ್ಯಾಪಕರೊಬ್ಬರನ್ನು ನೇಮಿಸುವ ಬಗ್ಗೆ ಸಿಂಡಿಕೇಟ್ ಸೂಕ್ತ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೋರಿದರು. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಡಾ. ಗೋಪಾಲ್ ಮರಾಠೆ ಕೆ., ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ : 10-08-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಮತ್ತೊಂದು ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಮತ್ತೇ ಮಾಲಿಕ್ಯುಲರ್ ಬಯಾಲಜಿ (Molecular Biology) ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.18** | ರಾಜ್ಯಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಮುಜಾಫರ್ ಹೆಚ್ ಅಸ್ಸಾದಿ, ಪ್ರಾಧ್ಯಾಪಕರು ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ: 28-08-2022ಕ್ಕೆ ಮುಕ್ತಾಯಗೊಳ್ಳುತ್ತಿದೆ ಹಾಗೂ ಇದೇ ವಿಭಾಗದಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಜಿ.ಟಿ. ರಾಮಚಂದ್ರಪ್ಪ ಇವರು ದಿನಾಂಕ: 31.07.2022 ರಂದು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತಿಯಾಗಲಿದ್ದಾರೆ.<br>ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತೆಗನುಸಾರವಾಗಿ ಸರದಿಯ ಮೇಲೆ ಪ್ರೊ ಕೃಷ್ಣ ಆರ್ ಹೊಂಬಾಳ್, ಪ್ರಾಧ್ಯಾಪಕರು ಇವರು ಹಿರಿಯರಾಗಿರುತ್ತಾರೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ ಕೃಷ್ಣ ಆರ್ ಹೊಂಬಾಳ್, ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 29-08-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ರಾಜ್ಯಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ನೇಮಕ ಮಾಡಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.19** | ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| | ಪ್ರೊ. ಕೆ. ಕೆಂಪರಾಜು, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರ |

| | |
|---|---|
| | ಅವಧಿಯು ದಿನಾಂಕ: 21-07-2022ಕ್ಕೆ ಮುಕ್ತಾಯಗೊಳ್ಳುತ್ತದೆಂದು ಕುಲಸಚಿವರು ಸಭೆಯ ಗಮನಕ್ಕೆ ತಂದು, ಸದರಿ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಿಸುವ ಬಗ್ಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕೆಂದು ಸಭೆಯನ್ನು ಕೋರಿದರು. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರೊ. ಕೆ. ಕೆಂಪರಾಜು, ಪ್ರಾಧ್ಯಾಪಕರು, ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ : 22-07-2022ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಮತ್ತೊಂದು ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ಮತ್ತೇ ಜೀವರಸಾಯನಶಾಸ್ತ್ರ ಅಧ್ಯಯನ ವಿಭಾಗದ ಅಧ್ಯಕ್ಷರನ್ನಾಗಿ ಮುಂದುವರೆಸಲು ಸಿಂಡಿಕೇಟ್ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/5.20 | ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನು ನೇಮಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| ತೀರ್ಮಾನ | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 21ರ ಅನ್ವಯ ಹಾಗೂ ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ, ಪ್ರೊ. ಬಿ.ಶಂಕರ, ನಿರ್ದೇಶಕರು, ಯುನಿವರ್ಸಿಟಿ ಸ್ಕೂಲ್ ಆಫ್ ಪ್ಲಾನಿಂಗ್ ಅಂಡ್ ಆರ್ಕಿಟೆಕ್ಚರ್, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 30-05-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಯೂನಿವರ್ಸಿಟಿ ಸ್ಕೂಲ್ ಆಫ್ ಇಂಜಿನಿಯರಿಂಗ್ ನಿಕಾಯಕ್ಕೆ ಡೀನರನ್ನಾಗಿ ನೇಮಕ ಮಾಡಿ ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| ಸಾಮಾನ್ಯ ಸಭೆ 2022/5.21 | B.Sc.-Hons. (Graphics, Animation and VFX), B.Sc.-Hons. (Animation and Game Design), M.Sc. (Graphics, Animation and VFX) (CB) ಹಾಗೂ BFA (Film Making), BBA (Aviation and Logistics) and M.A. (Indian Christian Theology and Missiology) ವಿಷಯಗಳಲ್ಲಿ ಹೊಸದಾಗಿ ಅಧ್ಯಯನ ಮಂಡಳಿಗಳನ್ನು ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ |
| ತೀರ್ಮಾನ | Principal Gupta Education Trust, Bangalore ಮತ್ತು Director, Marian Institute of Professional Studies, MIT Campus, K.R. Mills, Belavadi, Srirangapatana Tq, Mandya Dist. ಈ ಎರಡು ಸಂಸ್ಥೆಯವರು Specialized Programme ಅಡಿಯಲ್ಲಿ B.Sc.-Hons. (Graphics, Animation and VFX), B.Sc.-Hons. (Animation and Game Design), M.Sc. (Graphics, Animation and VFX) (CB) ಹಾಗೂ BFA (Film Making), BBA (Aviation and Logistics) and M.A. (Indian Christian Theology and Missiology) ಕೋರ್ಸ್‌ಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಅನುಮತಿ ಪಡೆದಿದ್ದು, ಸದರಿ ವಿಷಯಗಳಲ್ಲಿ ಅಧ್ಯಯನ ಮಂಡಳಿ (BOS)ಯನ್ನು ರಚಿಸಿಕೊಡುವಂತೆ ಕೋರಿದ್ದರಿಂದ, ಮಾನ್ಯ ಕುಲಪತಿಗಳ ಅನುಮೋದನೆ ಮೇರೆಗೆ ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಹೊಸ ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ: 09-06-2022ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/5.22** | B.Com. in (Banking), B.Com. in (Hotel Management), B.Com. in (Digital Marketing) (UG) ವಿಷಯಗಳಲ್ಲಿ ಅಧ್ಯಯನ ಮಂಡಳಿಯನ್ನು ರಚಿಸಿರುವ ಬಗ್ಗೆ–ಅನುಸಮರ್ಥನೆಗಾಗಿ. |
| **ತೀರ್ಮಾನ** | ಪ್ರಾಂಶುಪಾಲರು, ರತ್ನ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್‌ಮೆಂಟ್, ಮೈಸೂರು ಇವರು Specialized Programme ಅಡಿಯಲ್ಲಿ B.Com. in (Banking), B.Com. in (Hotel Management) and B.Com. in (Digital Marketing) (UG) ಕೋರ್ಸ್‌ಗಳನ್ನು ಪ್ರಾರಂಭಿಸಲು ಮೈಸೂರು ವಿಶ್ವವಿದ್ಯಾನಿಲಯದ ಅನುಮತಿ ಪಡೆದಿದ್ದು, ಸದರಿ ವಿಷಯಗಳಲ್ಲಿ ಅಧ್ಯಯನ ಮಂಡಳಿ (BOS)ಯನ್ನು ರಚಿಸಿಕೊಡುವಂತೆ ಕೋರಿದ್ದರಿಂದ, ಸಿಂಡಿಕೇಟ್ ಸಭೆಯ ತೀರ್ಮಾನವನ್ನು ಕಾಯ್ದಿರಿಸಿ, ಅಧ್ಯಯನ ಮಂಡಳಿಯನ್ನು ರಚಿಸಿ ದಿನಾಂಕ: 09-06-2022ರಂದು ಅಧಿಸೂಚನೆ ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.23** | ಶ್ರೀ ಗಣೇಶ್ ಆರ್., ದ್ವಿತೀಯ ದರ್ಜೆ ಗುಮಾಸ್ತರು, ಮಹಾರಾಜ ಕಾಲೇಜು, ಮೈಸೂರು ಇವರು ಸ್ವಯಂ ನಿವೃತ್ತಿ ಪಡೆಯಲು ಅನುಮತಿ ನೀಡುವ ಬಗೆಗೆ. |
| **ತೀರ್ಮಾನ** | ಶ್ರೀ ಗಣೇಶ್ ಆರ್., ದ್ವಿತೀಯ ದರ್ಜೆ ಗುಮಾಸ್ತರು, ಮಹಾರಾಜ ಕಾಲೇಜು, ಮೈಸೂರು ಇವರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ಅವಶ್ಯಕತೆಯಿದ್ದಲ್ಲಿ, ಶ್ರೀ ಗಣೇಶ್.ಆರ್ ಇವರನ್ನು ಸಂಪರ್ಕಿಸಿ, ಸ್ವಯಂ ನಿವೃತ್ತಿ ಪಡೆಯುವ ಕಾರಣವೇನೆಂದು ಮರುಪರಿಶೀಲಿಸಿ, ಮುಂದಿನ ಸಭೆಯಲ್ಲಿ ಈ ವಿಷಯವನ್ನು ಮಂಡಿಸಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.24** | ಶ್ರೀ ಕಪಿಲನ್ ಎ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಇಂಗ್ಲೆಂಡ್ ದೇಶಕ್ಕೆ ತೆರಳಲು ಅನುಮತಿ ನೀಡಿರುವ ಬಗ್ಗೆ. |
| **ತೀರ್ಮಾನ** | ಶ್ರೀ ಕಪಿಲನ್ ಎ., ವಾಹನ ಚಾಲಕರು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ದಿನಾಂಕ: 03-06-2022 ರಿಂದ 30-08-2022 ರವರೆಗೆ (ಒಟ್ಟು 88 ದಿವಸಗಳು) ವಿಶ್ವವಿದ್ಯಾನಿಲಯಕ್ಕೆ ಯಾವುದೇ ಆರ್ಥಿಕ ಹೊಣೆಗಾರಿಕೆಯಿಲ್ಲದಂತೆ ತಮ್ಮ ಹಕ್ಕಿನಲ್ಲಿರುವ ಗಳಿಕೆ ರಜೆಯನ್ನು ಉಪಯೋಗಿಸಿಕೊಂಡು ಇಂಗ್ಲೆಂಡ್ ದೇಶಕ್ಕೆ ಹೋಗಿಬರಲು ಅನುಮತಿ ನೀಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.25** | ಡಾ. ಚಂದ್ರನಾಯಕ್ ಎಸ್., ಸಂಯೋಜಕರು (ಪ್ರಭಾರ), ಐ.ಓ.ಇ. ಯೋಜನೆ, ಇವರು ಪ್ಯಾರಿಸ್‌ಗೆ ಹೋಗಿಬರಲು ಅನುಮತಿ ನೀಡುವ ಬಗ್ಗೆ. |
| **ತೀರ್ಮಾನ** | ಡಾ. ಚಂದ್ರನಾಯಕ್ ಎಸ್., ಸಂಯೋಜಕರು (ಪ್ರಭಾರ), ಐ.ಓ.ಇ. ಯೋಜನೆ, ಇವರು INSERM Paris, France ಸಂಸ್ಥೆಯೊಂದಿಗೆ ವಿಜ್ಞಾನ ಭವನದಲ್ಲಿ Applied Biological Sciences ಕಾರ್ಯಗತದಲ್ಲಿರುವ ವಿಷಯಕ್ಕೆ ಸಂಬಂಧಿಸಿದಂತೆ Memorandum of Understanding (MOU) ಒಳಪಡುವ ಸಂಬಂಧ ಚರ್ಚಿಸಲು ಜುಲೈ ಮಾಹೆಯಲ್ಲಿ INSERM Paris, France ಇಲ್ಲಿಗೆ ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಆರ್ಥಿಕ ಹೊರೆ ಇಲ್ಲದಂತೆ ಹೋಗಿಬರಲು ಹೊರ ದೇಶದ ಪ್ರಯಾಣಕ್ಕೆ VISA ಪಡೆಯಲು No Objection Certificate (NOC) ನೀಡಲಾಗಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.26** | ಶ್ರೀಮತಿ ಎ.ಸಿ. ಲಲಿತಾ, ನಿವೃತ್ತ ಸಹ ಪ್ರಾಧ್ಯಾಪಕರು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರು ಪಿಹೆಚ್.ಡಿ. ಪದವಿಯನ್ನು ಹೊಂದಿರದಿದ್ದರು ಪದೋನ್ನತಿ ಸೌಲಭ್ಯವನ್ನು ವಿಸ್ತರಿಸಿರುವ ಕುರಿತು. |

| | |
|---|---|
| **ತೀರ್ಮಾನ** | ಶ್ರೀಮತಿ ಎ.ಸಿ.ಲಲಿತಾರವರು ಈಗಾಗಲೇ ವಯೋನಿವೃತ್ತಿ ಹೊಂದಿದ್ದು, ಈ ಕುರಿತು ಸವಿವರವಾಗಿ ಮತ್ತೊಮ್ಮೆ ಆಡಿಟ್ ಆಕ್ಷೇಪಣೆ ಕೈಬಿಡುವಂತೆ ಕೋರಿ ಕಾನೂನುರೀತ್ಯ ಸರ್ಕಾರಕ್ಕೆ ಪತ್ರ ಬರೆಯಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.27** | Sera Jey Monastic Institute ಬೈಲಕುಪ್ಪೆ ಪೋಸ್ಟ್, ಮೈಸೂರು ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized Programme ಅಡಿಯಲ್ಲಿ 03 ಹೊಸ ಕೋರ್ಸ್‌ಗಳನ್ನು ಪ್ರಾರಂಭಿಸಲು ಮಾನ್ಯತೆ ಕೋರಿದ್ದ ಸಂಬಂಧ ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ 2022-23ನೇ ಶೈಕ್ಷಣಿಕ ಸಾಲಿನಿಂದ Sera Jey Monastic Institute ಬೈಲಕುಪ್ಪೆ ಪೋಸ್ಟ್, ಮೈಸೂರು ಜಿಲ್ಲೆ, ಇವರ ಸಂಸ್ಥೆಯು Specialized Programme ಅಡಿಯಲ್ಲಿ 1) B.A. Hons. (Ancient Tibetan Language), 2) B.A. Hons. (Ancient Philosophy) ಮತ್ತು 3) B.A. Hons. (Ancient Psychology) ಕೋರ್ಸುಗಳನ್ನು 40 ವಿದ್ಯಾರ್ಥಿಗಳ ಪ್ರವೇಶಾತಿ ಮಿತಿಯೊಳಗೆ ಪ್ರಾರಂಭಿಸುವುದಕ್ಕೆ ಮಾನ್ಯತೆ ನೀಡಲು ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.28** | ಮರಿಯನ್ ಇನ್ಸ್‌ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್ ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ ಪ್ರತಿ ಕೋರ್ಸ್‌ಗಳಿಗೆ ಹೆಚ್ಚುವರಿಯಾಗಿ 40 ಪ್ರವೇಶಾತಿಗಳಿಗೆ ಅನುಮತಿ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಮರಿಯನ್ ಇನ್ಸ್‌ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ ಕ್ಯಾಂಪಸ್, ಕೆ.ಆರ್.ಮಿಲ್, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ 1. BBA (Catering & Hotel Management) 2. BBA (Airline and Airport Management ಮತ್ತು 3. B.Sc. (Animation & VFX) ಕೋರ್ಸ್‌ಗಳಿಗೆ 2022-23ನೇ ಸಾಲಿನಿಂದ ಹೆಚ್ಚುವರಿಯಾಗಿ ಪ್ರತಿ ಕೋರ್ಸ್‌ಗೆ 20 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯೊಂದಿಗೆ ಪ್ರಾರಂಭಿಸಲು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.29** | ಸೆಬಾಟಿಕಲ್ ರಜಾ ಅವಧಿಯಲ್ಲಿ ನಿರ್ವಹಿಸಿದ ಅಂತಿಮ ಕಾರ್ಯವರದಿಯನ್ನು ತಜ್ಞರ ಸಮಿತಿಯು ಅಂಗೀಕರಿಸಿರುವ ಬಗ್ಗೆ. |
| **ತೀರ್ಮಾನ** | ಡಾ. ವೈ.ಹೆಚ್.ನಾಯಕ್‌ವಾಡಿ, ಪ್ರಾಧ್ಯಾಪಕರು, ಇತಿಹಾಸ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರು ಸೆಬಾಟಿಕಲ್ ರಜೆಯ ಅವಧಿಯಲ್ಲಿ ಸಂಶೋಧನೆಯನ್ನು ನಡೆಸಿ, ಸಿದ್ಧಪಡಿಸಲಾಗಿರುವ ಸಂಶೋಧನೆಯ ಅಂತಿಮ ವರದಿಯನ್ನು ತಜ್ಞರ ಸಮಿತಿಯು ಪರಿಶೀಲಿಸಿ ಅಂಗೀಕರಿಸಿರುವುದನ್ನು ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.30** | ಡಾ. ಮೋಕ್ಷಪತಿ ಎಸ್., ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಜನ್ಮ ದಿನಾಂಕದ ಬಗ್ಗೆ. |
| | ಕಾರ್ಯದರ್ಶಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು ಇವರು ಡಾ. ಮೋಕ್ಷಪತಿ.ಎಸ್, ನಿವೃತ್ತ ಸಹಾಯಕ ಪ್ರಾಧ್ಯಾಪಕರು, ಅಭಿವೃದ್ಧಿ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು ಇವರ ಜನ್ಮ ದಿನಾಂಕವನ್ನು |

| | |
|---|---|
| | 15-03-1951 ಎಂಬುದರ ಬದಲಾಗಿ 15-11-1953 ಎಂದು ತಿದ್ದುಪಡಿ ಮಾಡಿ ದಿನಾಂಕ: 18-04-2014ರಲ್ಲಿ ತಿದ್ದುಪಡಿ ಅಂಕಪಟ್ಟಿಯನ್ನು ನೀಡಲಾಗಿದೆ ಹಾಗೂ ಈ ಜನ್ಮ ದಿನಾಂಕದ ತಿದ್ದುಪಡಿಯನ್ನು ಯಾವುದೇ ಕಾರಣಕ್ಕೂ ಸೇವಾ ವಹಿಗಳಲ್ಲಿನ ಜನ್ಮ ದಿನಾಂಕದ ತಿದ್ದುಪಡಿಗೆ ಅನ್ವಯಿಸುವುದಿಲ್ಲ ಎಂಬ ಅಂಶವನ್ನು ಸ್ಪಷ್ಟಪಡಿಸಿ ಅಂಕಪಟ್ಟಿ ನೀಡಿರುತ್ತಾರೆ.<br><br>ಡಾ. ಈ.ಸಿ.ನಿಂಗರಾಜ್ ಗೌಡ ಹಾಗೂ ಶ್ರೀ ಎಸ್.ಡಿ.ದೊಡ್ಡಚಾರಿ ಅವರುಗಳು ಮಾತನಾಡಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ಅವರು ದಿ.15-11-1953 ಎಂದು ತಿದ್ದುಪಡಿ ಮಾಡಿ ಅಂಕಪಟ್ಟಿ ಕಳುಹಿಸಿರುವುದು ಕೇವಲ ಶಿಕ್ಷಣಕ್ಕೆ ಮಾತ್ರವೇ ಹೊರತು ಸೇವಾ ವಹಿಗೆ ಅನ್ವಯಿಸುವುದಿಲ್ಲ ಎಂದು ತಿಳಿಸಿದರು. |
| **ತೀರ್ಮಾನ** | ಈ ವಿಷಯದ ಕುರಿತಾಗಿ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಮತ್ತೊಮ್ಮೆ ಪಡೆದು ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.31** | ವಿಶ್ವವಿದ್ಯಾನಿಲಯದ ಸಂಶೋಧನಾ ಸಹಾಯಕ, ಕ್ಷೇತ್ರ ಸಹಾಯಕ ಮತ್ತು ಆಂಟಿಕ್ವಿಟಿ ಅಸಿಸ್ಟೆಂಟ್ ಹುದ್ದೆಗಳನ್ನು ಅಧಿನಿಯಮದನುಸಾರ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಾಗಿ ಉನ್ನತೀಕರಿಸಿರುವ ಬಗ್ಗೆ. |
| **ತೀರ್ಮಾನ** | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿರುವ ವಿವರಗಳೊಂದಿಗೆ ಮತ್ತು ಅಗತ್ಯ ದಾಖಲೆಗಳೊಂದಿಗೆ ಮತ್ತೊಮ್ಮೆ ಸರ್ಕಾರಕ್ಕೆ ಪತ್ರ ಬರೆದು ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.32** | ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಿರುವ ಬಗ್ಗೆ. |
| | ಡಾ. ನಾಗರಾಜ ನಾಯ್ಕ್, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರ ವಿಭಾಗದ ಅಧ್ಯಕ್ಷರ ಅವಧಿಯು ದಿನಾಂಕ: 30-06-2022 ಕ್ಕೆ ಮುಕ್ತಾಯಗೊಂಡಿದೆ. ವಿಭಾಗದ ಕೆಲಸಕಾರ್ಯಗಳು ಸುಲಲಿತವಾಗಿ ನಡೆಸುವ ಸಂಬಂಧ ರಸಾಯನಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳ ಜೇಷ್ಠತಾ ಪಟ್ಟಿಯಲ್ಲಿ ಸರದಿಯ ಮೇಲೆ ಹಿರಿಯರಾಗಿರುವ ಪ್ರೊ. ಹೆಚ್.ಡಿ.ರೇವಣ್ಣ, ಪ್ರಾಧ್ಯಾಪಕರು ಇವರನ್ನು ರಸಾಯನಶಾಸ್ತ್ರ ಅಧ್ಯಯನ ವಿಭಾಗ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಪ್ರೊ. ಹೆಚ್.ಡಿ.ರೇವಣ್ಣ, ಪ್ರಾಧ್ಯಾಪಕರು, ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ದಿನಾಂಕ: 30-06-2022 ರಿಂದ ಜಾರಿಗೆ ಬಂದಂತೆ ಎರಡು ವರ್ಷಗಳ ಅವಧಿಗೆ ಅಥವಾ ನಿವೃತ್ತಿಯ ದಿನಾಂಕದವರೆಗೆ ಅಥವಾ ಮುಂದಿನ ಆದೇಶದವರೆಗೆ, ಇವುಗಳಲ್ಲಿ ಯಾವುದು ಮೊದಲು ಘಟಿಸುವುದೋ, ಅಲ್ಲಿಯವರೆಗೆ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ನೇಮಕ ಮಾಡಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.33** | ಏಳು ಅಧ್ಯಯನ ಮಂಡಳಿಗಳನ್ನು ಪುನರ್‌ರಚಿಸಿರುವ ಬಗ್ಗೆ-ಅನುಸಮರ್ಥನೆಗಾಗಿ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000 ಪ್ರಕರಣ 33(1) ಮತ್ತು (2)ರ ಪ್ರಕಾರ ರಚಿಸಲಾಗಿದ್ದ ಈ ಕೆಳಕಂಡ ವಿಷಯಗಳ ಅಧ್ಯಯನ ಮಂಡಳಿಗಳ ಮೂರು ವರ್ಷಗಳ ಅವಧಿಯು ಅಂತ್ಯಗೊಂಡಿರುವುದರಿಂದ ಸದರಿ ವಿಷಯಗಳ ಅಧ್ಯಯನ |

| | |
|---|---|
| | ಮಂಡಳಿಗಳನ್ನು ಸಿಂಡಿಕೇಟ್ ನಿರ್ಣಯವನ್ನು ಕಾಯ್ದಿರಿಸಿ ಪುನರ್‌ರಚಿಸಿ ದಿನಾಂಕ: 21-06-2022ರಂದು ಅಧಿಸೂಚನೆಯನ್ನು ಹೊರಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು.<br>1. Agribusiness Management (PG)<br>2. Electronics (UG)<br>3. Electronics (PG)<br>4. Folklore (CB)<br>5. Polymer science (PG)<br>6. Sugar Technology (PG)<br>7. International Relations (PG) |
| **ಸಾಮಾನ್ಯ ಸಭೆ 2022/5.34** | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ ಪ್ರತಿ ವರ್ಷ ಸದರಿ ದತ್ತಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗೆ ಈ ಕೆಳಕಂಡ ಚಿನ್ನದ ಪದಕ ದತ್ತಿಗಳನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು. |

| ಕ್ರ. ಸಂ. | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಯ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 1 | "ಶ್ರೀಮತಿ ಬಿ.ಟಿ.ಶ್ಯಾಮಲ ವೈ ತಿಪ್ಪೇಸ್ವಾಮಿ ಚಿನ್ನದ ಪದಕ" | ಶ್ರೀ ಕೆ.ಎನ್.ಅಮೃತೇಶ್ ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಐಕ್ಯೂಎಸಿ ಸಂಯೋಜಕರು, ನೋಡಲ್ ಆಫೀಸರ್ (ಆಡಿಟ್) | M.Sc in Botany in First attempt and Securing Highest Marks | 1,00,000/- |
| 2 | "ಶ್ರೀ ಕೆ.ಸುಬ್ರಮಣ್ಯ ಸ್ಮರಣ ಚಿನ್ನದ ಪದಕ" | ಡಾ. ಲಲಿತ.ಕೆ ನಿವೃತ್ತ ಪ್ರಾಧ್ಯಾಪಕರು # 684, 3ನೇ ಮುಖ್ಯ ರಸ್ತೆ, ರಾಘವೇಂದ್ರ ಬ್ಲಾಕ್, ಶ್ರೀನಗರ ಬೆಂಗಳೂರು-560050 | M.B.A in First Attempt and Securing Highest Marks to student of B.N. Bahadur Institute of Management Science only. | 1,25,000/- |

| | |
|---|---|
| **ಸಾಮಾನ್ಯ ಸಭೆ 2022/5.35** | ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ ಪ್ರತಿ ವರ್ಷ ಸದರಿ ದತ್ತಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ವಿದ್ಯಾರ್ಥಿಗೆ ಈ ಕೆಳಕಂಡ ಚಿನ್ನದ ಪದಕ ದತ್ತಿಗಳನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು. |

| ಕ್ರ. ಸಂ. | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಯ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 1 | "ಶ್ರೀಮತಿ ಪದ್ಮ ಸತ್ಯನಾರಾಯಣ ಚಿನ್ನದ ಪದಕ" | Sri Radha Sudaresan, # 350, Jeeva Street, VGP Layout, Phase 1, Uthandi Chennai-600 119 | M.Sc in Physics Securing Second Highest Marks (Female Student) | 1,00,000/- |
| 2 | "ಶ್ರೀಮತಿ ಎಂ.ಬಿ. ಅನುರಾಧಾ ಎಂ ಚೌಡೇಗೌಡ ಚಿನ್ನದ ಪದಕ" | ಶ್ರೀಮತಿ ಎಂ.ಬಿ.ಅನುರಾಧಾ, # 454, 10ನೇ ಮೇನ್ ರಸ್ತೆ, ಕೆ.ಸಿ.ನಗರ, ಮೈಸೂರು-570 011 | M.A in Sociology in First Attempt and Securing Highest Marks. | 1,00,000/- |

**ಸಾಮಾನ್ಯ ಸಭೆ 2022/5.36**

ವಿಶ್ವವಿದ್ಯಾನಿಲಯದಲ್ಲಿ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ ಪ್ರತಿ ವರ್ಷ ಸದರಿ ದತ್ತಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ದಾನಿಗಳ ದತ್ತಿಯ ಷರತ್ತಿನಂತೆ ಸಂಬಂಧಿತ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗೆ ಈ ಕೆಳಕಂಡ ಚಿನ್ನದ ಪದಕ ದತ್ತಿಗಳನ್ನು ಸ್ಥಾಪಿಸಲು ಸಭೆಯು ಅನುಮೋದಿಸಿತು.

| ಕ್ರ. ಸಂ. | ದಾನಿಗಳು ಕೋರಿರುವ ದತ್ತಿಯ ಹೆಸರು | ದಾನಿಯ ಹೆಸರು ಮತ್ತು ವಿಳಾಸ | ಷರತ್ತುಗಳು | ಪಾವತಿಸಿರುವ ಮೊತ್ತ |
|---|---|---|---|---|
| 1 | "ಡಾ. ಬಿ.ಆರ್.ಅಂಬೇಡ್ಕರ್ ಚಿನ್ನದ ಪದಕ" | ಶ್ರೀ ಎಸ್.ಕೆ.ಗುರುಪಾದಸ್ವಾಮಿ # 3172, 1ನೇ ಕ್ರಾಸ್, 20ನೇ ಮುಖ್ಯ ರಸ್ತೆ, ವಿಜಯನಗರ 2ನೇ ಹಂತ, ಮೈಸೂರು-570 017 | M.A in Philosophy in First Attempt Securing Highest Marks | 1,00,000/- |
| 2 | "ಪ್ರೊ. ಎನ್.ನಿಂಗಯ್ಯ ಚಿನ್ನದ ಪದಕ" | ಶ್ರೀಮತಿ ಜೆ.ಮಹದೇವಮ್ಮ # 789, "ನಿರೂಪ", ಬೋಗಾದಿ 2ನೇ ಹಂತ (ಉತ್ತರ) ಮೈಸೂರು-570 026 | M.Sc in Anthropology First Attempt and Securing Highest Marks. | 1,00,000/- |

**ಸಾಮಾನ್ಯ ಸಭೆ 2022/5.37**

"ಪ್ರೊ. ಜಿ. ವೆಂಕಟೇಶ್ ಕುಮಾರ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ ದತ್ತಿ ಮೊತ್ತವಾದ ರೂ.1,00,000/-ದಲ್ಲಿ ಪ್ರತಿ ವರ್ಷ ಸದರಿ ದತ್ತಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು ಬಡ್ಡಿಯ ಹಣವನ್ನು ಸ್ನಾತಕೋತ್ತರ ಮನೋವಿಜ್ಞಾನ ವಿಷಯವನ್ನು ಕನ್ನಡ ಮಾಧ್ಯಮದ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ, ಅತಿ ಹೆಚ್ಚು ಅಂಕಗಳಿಸಿದ ಒಬ್ಬ ವಿದ್ಯಾರ್ಥಿಗೆ "ಪ್ರೊ. ಜಿ.ವೆಂಕಟೇಶ್ ಕುಮಾರ್ ಚಿನ್ನದ ಪದಕ" ದತ್ತಿ ಸ್ಥಾಪಿಸಲು ಸಭೆಯು ಅನುಮೋದಿಸಿತು.

**ಸಾಮಾನ್ಯ ಸಭೆ 2022/5.38**

"ಶ್ರೀಮತಿ ಲತಾ ದೇವಿ ಮತ್ತು ಪ್ರೊ. ಬಿ.ಹೆಚ್. ಸುರೇಶ್ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡುವ ಬಗ್ಗೆ.

**ತೀರ್ಮಾನ**

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000ರ ಪ್ರಕರಣ 31(2) (IX) ಪ್ರಕಾರ ದತ್ತಿ ಮೊತ್ತವಾದ ರೂ.1,00,000/-ದಲ್ಲಿ ಪ್ರತಿ ವರ್ಷ ಸದರಿ ದತ್ತಿ ಮೂಲಧನಕ್ಕೆ ಕ್ರೋಢಿಕೃತವಾಗುವ ಬಡ್ಡಿಯ ಹಣದಲ್ಲಿ ಶೇ.20 ರಷ್ಟನ್ನು ದತ್ತಿಯ ಮೂಲ ಧನಕ್ಕೆ ಸೇರಿಸಿ, ಉಳಿದ ಶೇ.80 ರಷ್ಟು

| | |
|---|---|
| | ಬಡ್ಡಿಯ ಹಣವನ್ನು ಎಂ.ಕಾಂ ಪದವಿ ಪರೀಕ್ಷೆಯಲ್ಲಿ ಅಧ್ಯಯನ ಮಾಡಿ, ಮೊದಲನೇ ಬಾರಿಗೆ ಮೂರನೇ ಅತಿ ಹೆಚ್ಚು ಅಂಕಗಳಿಸಿದ ಒಬ್ಬ ವಿದ್ಯಾರ್ಥಿಗೆ "ಶ್ರೀಮತಿ ಲತಾದೇವಿ ಮತ್ತು ಪ್ರೊ. ಬಿ.ಹೆಚ್.ಸುರೇಶ್ ಚಿನ್ನದ ಪದಕ" ದತ್ತಿ ಸ್ಥಾಪಿಸಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.39** | ಪ್ರೊ. ಡಿ.ಆನಂದ್, ಪ್ರಾಧ್ಯಾಪಕರು, ವ್ಯವಹಾರ ಆಡಳಿತ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಪ್ರಾಧ್ಯಾಪಕರಾಗಿ ಮುಂಬಡ್ತಿಯನ್ನು ನೀಡಿರುವ ಬಗ್ಗೆ. |
| **ತೀರ್ಮಾನ** | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಮುಂಬಡ್ತಿ ನೀಡಿರುವುದನ್ನು ನಿಯಮಗಳೊಂದಿಗೆ ಮತ್ತೊಮ್ಮೆ ಸವಿವರವಾಗಿ ಸರ್ಕಾರಕ್ಕೆ ಪತ್ರ ಬರೆದು ಆಕ್ಷೇಪಣೆ ಕೈಬಿಡುವಂತೆ ಕೋರಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.40** | ಶ್ರೀ ಹೆಚ್.ವಿ. ಕೃಷ್ಣ, ದ್ವಿತೀಯ ದರ್ಜೆ ಗುಮಾಸ್ತರು, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಯ, ಮೈಸೂರು ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸುವ ಬಗ್ಗೆ. |
| **ತೀರ್ಮಾನ** | ಶ್ರೀ ಹೆಚ್.ವಿ. ಕೃಷ್ಣ, ದ್ವಿತೀಯ ದರ್ಜೆ ಗುಮಾಸ್ತರು, ಮಹಾರಾಜ ಕಾಲೇಜು, ಮೈಸೂರು ಇವರನ್ನು ಅಥವಾ ಇವರ ಕುಟುಂಬ ಅವಲಂಭಿತರನ್ನು ಸಂಪರ್ಕಿಸಿ, ಕಛೇರಿಗೆ ಅನಧಿಕೃತವಾಗಿ ಗೈರುಹಾಜರಾಗಲು ಕಾರಣವೇನೆಂದು ಸ್ಪಷ್ಟೀಕರಣ ಪಡೆಯಬೇಕೆಂದು ಸಭೆಯಲ್ಲಿ ನಿರ್ಧರಿಸಲಾಯಿತು. |
| **ಸಾಮಾನ್ಯ ಸಭೆ 2022/5.41** | ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್, ಮೈಸೂರು ಇವರಿಗೆ ಹೊಸದಾಗಿ Chemistry, Physics, Mathematics and Computer Science ವಿಷಯದಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ವಿದ್ಯಾವರ್ಧಕ ಕಾಲೇಜ್ ಆಫ್ ಇಂಜಿನಿಯರಿಂಗ್, ಪಿ.ಬಿ.ನಂ.206, ಗೋಕುಲಂ 3ನೇ ಹಂತ, ಮೈಸೂರು ಸಂಸ್ಥೆಗೆ ಹೊಸದಾಗಿ Chemistry, Physics, Mathematics and Computer Science ವಿಷಯಗಳಲ್ಲಿ ಪಿಹೆಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಭೆಯು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.42** | ಪ್ರೊ. ಹೆಚ್. ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ಅಮಾನತ್ತುಗೊಳಿಸುತ್ತಿರುವ ಬಗ್ಗೆ. |
| **ತೀರ್ಮಾನ** | ಸರ್ಕಾರದ ನಿರ್ದೇಶನದಂತೆ ಮೈಸೂರು ವಿಶ್ವವಿದ್ಯಾನಿಲಯವು ಪ್ರೊ.ಹೆಚ್.ನಾಗರಾಜ್, ಪ್ರಾಧ್ಯಾಪಕರು, ಭೂಗೋಳಶಾಸ್ತ್ರ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇವರನ್ನು ವಿಶ್ವವಿದ್ಯಾನಿಲಯದ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುವುದನ್ನು ಅನುಸಮರ್ಥಿಸಿ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾ ಅಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಲು ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.43** | ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾಗಿ ಬೇಕಾಗಿರುವ ಅಡುಗೆ ಸಿಬ್ಬಂದಿಯ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯುವ |

| | |
|---|---|
| | ಸಂಬಂಧ ಮೆ.: ಕಾಂತಿ ಏಜೆನ್ಸಿ ನೆಟ್‌ವರ್ಕ್ ಮೈಸೂರು ಸಂಸ್ಥೆಯು ಆಯ್ಕೆಗೊಂಡಿರುವ ಬಗ್ಗೆ. |
| **ತೀರ್ಮಾನ** | ೨೦೨೧-೨೨ನೇ ಶೈಕ್ಷಣಿಕ ಸಾಲಿಗೆ ಮೈಸೂರು ವಿಶ್ವವಿದ್ಯಾನಿಲಯದ ಮೈಸೂರು ನಗರ ವ್ಯಾಪ್ತಿಗೆ ಒಳಪಡುವ ಸ್ನಾತಕ/ಸ್ನಾತಕೋತ್ತರ ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಯನ್ನು ಕಲ್ಪಿಸಲು ಅಗತ್ಯವಾಗಿ ಬೇಕಾಗಿರುವ ಅಡುಗೆ ಸಿಬ್ಬಂದಿಯ ಸೇವೆಯನ್ನು ಒಂದು ವರ್ಷದ ಅವಧಿಗೆ ಹೊರಗುತ್ತಿಗೆಯ ಆಧಾರದ ಮೇಲೆ ಪಡೆಯುವ ಸಂಬಂಧ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿ ಮೆ.: ಕಾಂತಿ ಏಜೆನ್ಸಿ ನೆಟ್‌ವರ್ಕ್, ಮೈಸೂರು ಸಂಸ್ಥೆಯನ್ನು ಅಂಗೀಕರಿಸಿರುವುದನ್ನು ಹಾಗೂ ಅಡುಗೆ ಸಿಬ್ಬಂದಿಗಳಿಗೆ ಈ ಕೆಳಕಂಡಂತೆ ಪರಿಷ್ಕೃತ ವೇತನ ನಿಗಧಿಪಡಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |

| ಕ್ರ. ಸಂ. | ವಿವರ | ಮುಖ್ಯ ಅಡುಗೆಯವರು | ಸಹಾಯಕರು | ಹೆಲ್ಪರ್ಸ್ |
|---|---|---|---|---|
| 1 | Basic Salary | 13603.6 | 13011,6 | 12641.6 |
| 2 | EPF (13%) | 1768.5 | 1694.1 | 1643.4 |
| 3 | ESI (3.25%) | 442.1 | 423,5 | 410.9 |
| 4 | Service Charge (2%) | 316.2 | 302.9 | 293.9 |
| 5 | GST (18%) | 2903.4 | 2,781.3 | 2,698.1 |
| | Total in Rs. | 19033.79 | 18.233.44 | 17,687.86 |

| | |
|---|---|
| **ಸಾಮಾನ್ಯ ಸಭೆ ೨೦೨೨/೫.೪೪** | ಮೆ: ಸೌಮ್ಯಶ್ರೀ ಟ್ರೇಡರ್ಸ್, ಮಂಡ್ಯರವರಿಗೆ ಅಡುಗೆ ಎಣ್ಣೆ ದರ ರೂ. ಲೀಟರ್‌ಗೆ 118/- ರಿಂದ ಪ್ರಸ್ತುತ ಮಾರುಕಟ್ಟೆ ದರ ರೂ. ರೂ. 193/-ಗಳಿಗೆ ಪರಿಷ್ಕೃತಗೊಳಿಸಿ ಪಾವತಿಸಿರುವ ಕುರಿತು. |
| **ತೀರ್ಮಾನ** | ಜನವರಿ ೨೦೨೨ ಮಾಹೆಯಿಂದ ಅಡುಗೆ ಎಣ್ಣೆ ದರವು ಹೆಚ್ಚಳವಾಗಿರುವುದರಿಂದ, ಇದೊಂದು ವಿಶೇಷ ಪ್ರಕರಣವೆಂದು ಪರಿಗಣಿಸಿ ಮೆ: ಸೌಮ್ಯಶ್ರೀ ಟ್ರೇಡರ್ಸ್, ಮಂಡ್ಯರವರಿಗೆ ಅಡುಗೆ ಎಣ್ಣೆ ದರ ರೂ. ಲೀಟರ್‌ಗೆ 118/-ರಿಂದ ಪ್ರಸ್ತುತ ಮಾರುಕಟ್ಟೆ ದರ ರೂ. ರೂ. 193/-ಗಳಿಗೆ ಪರಿಷ್ಕೃತಗೊಳಿಸಿರುವುದನ್ನು ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ ೨೦೨೨/೫.೪೫** | ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಗೆ ಅಗತ್ಯವಾಗಿ ಬೇಕಾಗಿರುವ ಆಹಾರ ಪದಾರ್ಥಗಳನ್ನು (ತರಕಾರಿ, ಹಾಲು, ಮೊಸರು ಮತ್ತು ಚಿಕನ್ ಇತ್ಯಾದಿಗಳನ್ನು) ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಪಡೆಯುವ ಸಂಬಂಧ ಮೆ: ವಿನಾಯಕ ಎಂಟರ್‌ಪ್ರೈಸಸ್ ಸಂಸ್ಥೆಯು ಆಯ್ಕೆಗೊಂಡಿರುವ ಬಗ್ಗೆ. |
| **ತೀರ್ಮಾನ** | ೨೦೨೨-೨೩ನೇ ಶೈಕ್ಷಣಿಕ ಸಾಲಿಗೆ ಮೈಸೂರು ನಗರ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಾದ ಆಹಾರ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಪಡೆಯುವ ಸಂಬಂಧ ಅಲ್ಪಾವಧಿ ಮರುಟೆಂಡರ್‌ನಲ್ಲಿ ತುಲನಾತ್ಮಕ ದರಪಟ್ಟಿಯಲ್ಲಿ ಮಾಹೆಯಾನ ಒಟ್ಟಾರೆ ಕಡಿಮೆ ಮೊತ್ತ ರೂ.೨೫,೧೮,೭೨೭=೦೦ಗಳನ್ನು ನಮೂದಿಸಿರುವ ಮೆ: ವಿನಾಯಕ ಎಂಟರ್‌ಪ್ರೈಸಸ್ ಸಂಸ್ಥೆ, ಚಾಮರಾಜನಗರ ಇವರನ್ನು ಆಯ್ಕೆ ಮಾಡಿರುವುದಕ್ಕೆ ಸಭೆಯು ಅನುಸಮರ್ಥಿಸಿತು. |

| | |
|---|---|
| **ಸಾಮಾನ್ಯ ಸಭೆ 2022/5.46** | ವಿಶ್ವವಿದ್ಯಾನಿಲಯದ ವಿವಿಧ ಗ್ರಂಥಾಲಯಗಳಲ್ಲಿ ಗ್ರಂಥಾಲಯ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದವರುಗಳಿಗೆ ಸಹಾಯಕ ಗ್ರಂಥಪಾಲಕರಾಗಿ ಪದೋನ್ನತಿಯನ್ನು ನೀಡಿ ಯು.ಜಿ.ಸಿ. ವೇತನ ಶ್ರೇಣಿಯನ್ನು ನೀಡಿರುವ ಬಗ್ಗೆ. |
| **ತೀರ್ಮಾನ** | ಸದರಿ ವಿಷಯದ ಬಗ್ಗೆ ಕೂಲಂಕಷವಾಗಿ ಚರ್ಚಿಸಿದ ಸಿಂಡಿಕೇಟ್ ಈಗಾಗಲೇ ಸರ್ಕಾರಕ್ಕೆ ಸಲ್ಲಿಸಲಾಗಿರುವ ವಿವರಗಳೊಂದಿಗೆ ಮತ್ತು ಅಗತ್ಯ ದಾಖಲೆಗಳೊಂದಿಗೆ ಮತ್ತೊಮ್ಮೆ ಸರ್ಕಾರಕ್ಕೆ ಪತ್ರ ಬರೆದು ಆಕ್ಷೇಪಣೆಯನ್ನು ಕೈಬಿಡುವಂತೆ ಕೋರಲು ತೀರ್ಮಾನಿಸಿತು. |
| **ಸಾಮಾನ್ಯ ಸಭೆ 2022/5.47** | ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡುವ ಬಗ್ಗೆ. |
| **ತೀರ್ಮಾನ** | ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ 2000, ಪ್ರಕರಣ 34(7)ರ ಪ್ರಕಾರ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಜೇಷ್ಠತಾ ಪಟ್ಟಿಯಲ್ಲಿ ಸರದಿಯ ಮೇಲೆ ಹಿರಿಯರಾಗಿರುವವರನ್ನು ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರನ್ನು ನೇಮಕ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.48** | Aurigene Discovery Technologies Ltd., ಬೆಂಗಳೂರು ಇವರು ಹೊಸದಾಗಿ Chemistry and Biochemistry ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ಕೋರಿರುವ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿ ಶಿಫಾರಸ್ಸಿನನ್ವಯ Aurigene Discovery Technologies Ltd., 39-40 KIADB ಇಂಡಸ್ಟ್ರಿಯಲ್ ಏರಿಯಾ, ಎಲೆಕ್ಟ್ರಾನಿಕ್ಸ್ ಸಿಟಿ ಫೇಸ್-2, ಹೊಸೂರು ರಸ್ತೆ, ಬೆಂಗಳೂರು ಇವರು ಹೊಸದಾಗಿ Chemistry and Biochemistry ವಿಷಯದಲ್ಲಿ ಪಿಎಚ್.ಡಿ. ಸಂಶೋಧನೆ ನಡೆಸಲು ವಿಶ್ವವಿದ್ಯಾನಿಲಯದಿಂದ ಸಂಶೋಧನಾ ಕೇಂದ್ರದ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.49** | ವಿದ್ಯಾರ್ಥಿನಿಲಯಗಳಲ್ಲಿನ ಭೋಜನ ವ್ಯವಸ್ಥೆಗೆ ಅಗತ್ಯವಾಗಿ ಬೇಕಾಗಿರುವ ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಪಡೆಯುವ ಸಂಬಂಧ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ ಫೆಡರೇಶನ್ ಲಿಮಿಟೆಡ್ ಸಂಸ್ಥೆಯು ಆಯ್ಕೆಗೊಂಡಿರುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿಗೆ ಮೈಸೂರು ನಗರ ವ್ಯಾಪ್ತಿಗೆ ಒಳಪಡುವ ವಿಶ್ವವಿದ್ಯಾನಿಲಯದ ವಿದ್ಯಾರ್ಥಿನಿಲಯಗಳಿಗೆ ಅಗತ್ಯವಾದ ದಿನಸಿ ಪದಾರ್ಥಗಳನ್ನು ವಾರ್ಷಿಕ ದರ ಒಪ್ಪಂದದ ಆಧಾರದ ಮೇಲೆ ಸರಬರಾಜು ಪಡೆಯುವ ಸಂಬಂಧ ಅಲ್ಪಾವಧಿ ಮರುಟೆಂಡರ್‌ನಲ್ಲಿ ತುಲನಾತ್ಮಕ ದರಪಟ್ಟಿಯಲ್ಲಿ ಮಾಹೆಯಾನ ಒಟ್ಟಾರೆ ಕಡಿಮೆ ಮೊತ್ತ ರೂ.50,51,220=00ಗಳನ್ನು ನಮೂದಿಸಿರುವ ಮೆ: ಕರ್ನಾಟಕ ಸ್ಟೇಟ್ ಕೋ-ಆಪರೇಟಿವ್ ಕನ್ಸ್ಯೂಮರ್ ಫೆಡರೇಶನ್ ಲಿಮಿಟೆಡ್ ಸಂಸ್ಥೆ, ಮಂಡ್ಯ ಇವರನ್ನು ಆಯ್ಕೆ ಮಾಡಿರುವುದಕ್ಕೆ ಸಭೆಯು ಅನುಸಮರ್ಥಿಸಿತು. |
| **ಸಾಮಾನ್ಯ ಸಭೆ 2022/5.50** | ಸಂಪೂರ್ಣ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಗ್ರಿ ಸೈನ್ಸ್ ಅಂಡ್ ಹಾರ್ಟಿಕಲ್ಚರ್ ಟೆಕ್ನಾಲಜಿ, ಮಂಡ್ಯ ಇವರು ಕೋರಿರುವ ಹೆಚ್ಚುವರಿ ಕೋರ್ಸ್‌ಗಳ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿ ಬಗ್ಗೆ. |
| **ತೀರ್ಮಾನ** | ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನನ್ವಯ ಸಂಪೂರ್ಣ ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಅಗ್ರಿ ಸೈನ್ಸ್ ಅಂಡ್ ಹಾರ್ಟಿಕಲ್ಚರ್ ಟೆಕ್ನಾಲಜಿ, ಮಂಡ್ಯ ಸಂಸ್ಥೆಯು |

| | |
|---|---|
| | ವಿಶ್ವವಿದ್ಯಾನಿಲಯದಿಂದ Specialized Programme ಅಡಿಯಲ್ಲಿ ಮಾನ್ಯತೆ ಪಡೆದು ನಡೆಸುತ್ತಿರುವ ಕೋರ್ಸ್‌ಗಳ ಜೊತೆಗೆ ಹೆಚ್ಚುವರಿಯಾಗಿ 1. M.Sc (Agri) Agronomy, 2. M.Sc (Agri) Entomology ಮತ್ತು 3. M.Sc (Agri) Genetics and Plant Breeding ಕೋರ್ಸ್‌ಗಳನ್ನು 40 ವಿದ್ಯಾರ್ಥಿಗಳ ಪ್ರವೇಶಾತಿ ಸಂಖ್ಯಾಮಿತಿಯೊಂದಿಗೆ ಮಾನ್ಯತೆ ನೀಡಲು ಸಭೆಯು ಅನುಮೋದಿಸಿತು. |
| **ಸಾಮಾನ್ಯ ಸಭೆ 2022/5.51** | ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳ ವಿಚಾರಣಾ ಸಮಿತಿಯ ಶಿಫಾರಸುಗಳು. |
| **ತೀರ್ಮಾನ** | ಮಾರ್ಚ್/ಏಪ್ರಿಲ್ 2022ರಲ್ಲಿ ನಡೆದ ಬಿ.ಎ./ಬಿ.ಎಸ್ಸಿ/ಬಿ.ಕಾಂ./ಬಿ.ಬಿ.ಎಂ./ ಬಿ.ಬಿ.ಎ./ ಬಿ.ಸಿ.ಎ./ಬಿ.ಎ.ಎಲ್.ಎಲ್.ಬಿ./ಬಿ.ಕಾಂ.ಎಲ್.ಎಲ್.ಬಿ. ಪದವಿಗಳ 1, 3, 5 ಹಾಗೂ 7ನೇ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮದ ಆರೋಪಕ್ಕೆ ಒಳಗಾದ ಪ್ರಕರಣಗಳಿಗೆ ಏಕಪಕ್ಷೀಯ ನಿರ್ಣಯವನ್ನು ತೆಗೆದುಕೊಂಡು ಎಂ.ಪಿ.ಎಲ್.ಇ ಸಮಿತಿಯು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿರುವ ಶಿಫಾರಸ್ಸುಗಳನ್ನು ಸಭೆಯು ಅನುಮತಿಸಿತು. |
| **ಸಾಮಾನ್ಯ ಸಭೆ 2022/5.52** | 2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಮೈಸೂರು ಕಾಲೇಜಿನ ಸ್ನಾತಕೋತ್ತರ ಕೋರ್ಸುಗಳನ್ನು ಸಂಸ್ಥೆಯ ಬೇರೊಂದು ಕಟ್ಟಡಕ್ಕೆ ಬದಲಾವಣೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಅಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಸಲ್ಲಿಸಿರುವ ವರದಿ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿಗೆ ಎಸ್.ಬಿ.ಆರ್.ಆರ್. ಮಹಾಜನ ಪ್ರಥಮ ದರ್ಜೆ ಕಾಲೇಜು (ಸ್ವಾಯತ್ತ), ಮೈಸೂರು ಕಾಲೇಜಿನ ಸ್ನಾತಕೋತ್ತರ ಕೋರ್ಸುಗಳನ್ನು ಸಂಸ್ಥೆಯ ಬೇರೊಂದು ಕಟ್ಟಡಕ್ಕೆ ಬದಲಾವಣೆ ಮಾಡಲು ಸ್ಥಳೀಯ ವಿಚಾರಣಾ ಸಮಿತಿಯು ಭೇಟಿ ನೀಡಿ ಅಲ್ಲಿನ ಮೂಲಭೂತ ಸೌಲಭ್ಯಗಳನ್ನು ಪರಿಶೀಲಿಸಿ ಈ ಕೆಳಕಂಡ ನಿಬಂಧನೆ ಮತ್ತು ಶಿಫಾರಸ್ಸು ಮಾಡಿರುವುದನ್ನು ಸಭೆಯು ಅನುಮೋದಿಸಿತು.<br>"The College is currently, labeling the new campus as Pooja Bhagawath Postgraduate campus which has to be avoided. The new campus should be renamed as the campus of the Parent College". |
| **ಸಾಮಾನ್ಯ ಸಭೆ 2022/5.53** | ಯುಜಿಸಿ 10ನೇ ಯೋಜನೆಯಡಿ ನೇಮಕಗೊಂಡಿರುವ ಅಧ್ಯಾಪಕರುಗಳನ್ನು ಅಧಿನಿಯಮದನುಸಾರ ನಿಯತಗೊಳಿಸಿರುವುದರ ಬಗ್ಗೆ. |
| **ತೀರ್ಮಾನ** | ಸದರಿ ವಿಷಯವನ್ನು ಸವಿವರವಾಗಿ ಚರ್ಚಿಸಿದ ಸಿಂಡಿಕೇಟ್ ಸಭೆಯು ಕಾನೂನುರೀತ್ಯ /statute ಪ್ರಕಾರ (ಚಾಲ್ತಿಯಲ್ಲಿರುವ) ಅಧಿನಿಯಮದ ಎಲ್ಲಾ ಅಂಶಗಳನ್ನು ವಿವರಿಸಿ ಸರ್ಕಾರದ ಮುಖಾಂತರವೇ ಮಾನ್ಯ ಕುಲಾಧಿಪತಿಯವರಿಂದ ಅಂಕಿತ ಆಗಿರುವುದನ್ನು ತಿಳಿಯಪಡಿಸಿ, ನಿಯಮಗಳ ಪ್ರತಿಯೊಂದಿಗೆ ಮತ್ತೊಮ್ಮೆ ಸರ್ಕಾರಕ್ಕೆ ಈ ಬಗ್ಗೆ ಪತ್ರ ಬರೆಯಲು ತೀರ್ಮಾನಿಸಲಾಯಿತು. |
| **ಸಾಮಾನ್ಯ ಸಭೆ 2022/5.54** | ಮೈಸೂರು ವಿಶ್ವವಿದ್ಯಾನಿಲಯದ ಶುಲ್ಕಗಳನ್ನು Digital Payment System ಮೂಲಕ ಪಾವತಿಸಿಕೊಳ್ಳುವ ಬಗ್ಗೆ. |
| **ತೀರ್ಮಾನ** | 2022-23ನೇ ಶೈಕ್ಷಣಿಕ ಸಾಲಿನಿಂದ ವಿಶ್ವವಿದ್ಯಾನಿಲಯದ ವ್ಯಾಪ್ತಿಗೊಳಪಡುವ ಕಾಲೇಜುಗಳು, ಅಧ್ಯಯನ ವಿಭಾಗಗಳು, ಸ್ನಾತಕೋತ್ತರ ಕೇಂದ್ರಗಳು ಮತ್ತು |

| | |
|---|---|
| | ಸಂಯೋಜಿತ ಕಾಲೇಜುಗಳು ಪ್ರವೇಶಾತಿಗೆ ಸಂಬಂಧಿಸಿದ ಎಲ್ಲಾ ಶುಲ್ಕಗಳನ್ನು Digital Payment System ಮೂಲಕ ಪಾವತಿಸಿಕೊಳ್ಳಲು ಅನುಮತಿಸಿತು. |
| ಸಾಮಾನ್ಯ ಸಭೆ 2022/5.55 | ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡದಲ್ಲಿ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸಲು ಸದರಿ ಕಟ್ಟಡವನ್ನು ಎಂ.ಓ.ಯು. ಮೂಲಕ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನೀಡುವ ಬಗ್ಗೆ. |
| ತೀರ್ಮಾನ | ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕರ ಮನವಿ ಮೇರೆಗೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡದಲ್ಲಿ ಶಾಸ್ತ್ರೀಯ ಕನ್ನಡ ಭಾಷಾ ಅತ್ಯುನ್ನತ ಅಧ್ಯಯನ ಕೇಂದ್ರವನ್ನು ಎಂ.ಓ.ಯು ಮೂಲಕ ಸ್ಥಾಪಿಸಲು ಸಭೆಯು ಒಪ್ಪಿಗೆ ಸೂಚಿಸಿತು. |
| ಸಾಮಾನ್ಯ ಸಭೆ 2022/5.56 | ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ರಚಿಸಿರುವ ಅಧಿನಿಯಮದ ಬಗ್ಗೆ. |
| | ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರು ಮಾತನಾಡಿ, ಪ್ರಾಚ್ಯವಿದ್ಯಾ ಸಂಶೋಧನಾಲಯದ ಹುದ್ದೆಗಳಿಗೆ ಸಂಬಂಧಪಟ್ಟಂತೆ ನೂತನವಾಗಿ ಅಧಿನಿಯಮವನ್ನು ರಚಿಸಿರುವುದು ಪೂರ್ಣವಾಗಿ ಮಾರ್ಪಾಡಾಗಿರುತ್ತದೆಂದು ಆಕ್ಷೇಪಣೆಯನ್ನು ವ್ಯಕ್ತಪಡಿಸಿದರು.<br>ಈ ಸಂಬಂಧ ಮಾನ್ಯ ಕುಲಪತಿಗಳು ಮಾತನಾಡಿ, ಈ ಅಧಿನಿಯಮವನ್ನು ಪುನರವಲೋಕನ ಮಾಡಲು ರಚಿಸಲಾಗಿರುವ ಸಮಿತಿಯು ಮತ್ತೊಮ್ಮೆ ಸಭೆಯನ್ನು ಕರೆದು, ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಇವರನ್ನು ವಿಶೇಷ ಆಹ್ವಾನಿತರಾಗಿ ಆಹ್ವಾನಿಸುವುದು. ಸದರಿ ಸಮಿತಿ ಸಭೆಯಲ್ಲಿ ಪ್ರಾಚ್ಯವಿದ್ಯಾ ಸಂಶೋಧನಾಲಯಕ್ಕೆ ಸಂಬಂಧಪಟ್ಟಂತೆ ಯುಜಿಸಿ ನಿಯಮವನ್ನು, ರಾಜ್ಯ ಸರ್ಕಾರದ ನಿಯಮವನ್ನು ಹಾಗೂ ವಿಶ್ವವಿದ್ಯಾನಿಲಯದ ಅವಶ್ಯಕತೆಗನುಗುಣವಾಗಿ ಅಧಿನಿಯಮವನ್ನು ಪುನರವಲೋಕನ ಮಾಡಿ, ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಕ್ರಮ ವಹಿಸಬೇಕೆಂದು ತಿಳಿಸಿದರು. |
| ತೀರ್ಮಾನ | ಮುಂದೂಡಲಾಯಿತು |
| ಸಾಮಾನ್ಯ ಸಭೆ 2022/5.57 | ವಿಶ್ವವಿದ್ಯಾನಿಲಯದ ಯುನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿಗೆ ತಾತ್ಕಾಲಿಕ ಅಧ್ಯಾಪಕರನ್ನು ನೇಮಿಸುವ ಬಗೆಗೆ. |
| ತೀರ್ಮಾನ | ವಿಶ್ವವಿದ್ಯಾನಿಲಯದ ಯುನಿವರ್ಸಿಟಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಐದು ವಿಷಯಗಳನ್ನು ಕೆಇಎ ಹಾಗೂ ಸ್ವಯಂ ಆರ್ಥಿಕ ಯೋಜನೆಯಡಿಯಲ್ಲಿ ಪ್ರತಿ ವಿಭಾಗಕ್ಕೆ 60 ವಿದ್ಯಾರ್ಥಿಗಳಂತೆ ಪ್ರವೇಶಾತಿಯನ್ನು ನೀಡಲಾಗಿದ್ದು, ಈ ಸಂಬಂಧ ತರಗತಿಗಳನ್ನು ನಡೆಸಲು 15 ತಾತ್ಕಾಲಿಕ ಉಪನ್ಯಾಸಕರುಗಳನ್ನು ಲಿಖಿತ ಮತ್ತು ಮೌಖಿಕ ಪರೀಕ್ಷೆಗಳ ಮುಖಾಂತರ ನೇಮಕಾತಿ ಮಾಡಿಕೊಳ್ಳಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| ಸಾಮಾನ್ಯ ಸಭೆ 2022/5.58 | Promotions to University Teachers Under UGC-CAS |
| ತೀರ್ಮಾನ | The recommendations of the Selection Committee in various subjects for promotion of teachers in various disciplines to the higher AGP furnished in Annexure is approved. Further, the Syndicate has also decided to extend the monetary benefits to the teachers from the date of the decision of the Syndicate. |
| ಸಾಮಾನ್ಯ ಸಭೆ 2022/5.59 | ದಿನಾಂಕ: 25-05-2022 ರಂದು ನಡೆದ ಎರಡನೇ ಕ್ರೀಡಾ ಸಮಿತಿಯ ನಡವಳಿಯನ್ನು ಅನುಮೋದಿಸುವ ಬಗೆಗೆ. |
| ತೀರ್ಮಾನ | ದಿನಾಂಕ: 25-05-2022 ರಂದು ನಡೆದ ಎರಡನೇ ಕ್ರೀಡಾ ಸಮಿತಿಯ ನಡವಳಿಯನ್ನು ಸಭೆಯು ಅನುಮೋದಿಸಿತು. |

**ಇತರೆ ವಿಷಯಗಳು:**

1) ಆಡಿಟ್ ಆಕ್ಷೇಪಣೆಗೊಳಪಟ್ಟ ವಿಷಯಗಳನ್ನು ಸಿಂಡಿಕೇಟ್ ವಿಶೇಷ ಸಭೆಯನ್ನು ಏರ್ಪಡಿಸಿ ಚರ್ಚಿಸಬೇಕೆಂದು ಶ್ರೀ ಎಸ್.ಡಿ.ದೊಡ್ಡಚಾರಿ ಸಭೆಯಲ್ಲಿ ಕೋರಿದರು.

2) ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, Agribusiness Management ನ್ನು ಪರಿಶೀಲಿಸಬೇಕು. ಒಂದು ವೇಳೆ Agribusiness ಮ್ಯಾನೇಜ್‌ಮೆಂಟ್‌ಗೆ ವಿಲೀನಗೊಂಡಿದ್ದರೆ ಮಾನ್ಯತೆ ನೀಡಬಹುದೆಂದು ತಿಳಿಸಿದರು. ಈ ಸಂಬಂಧ ಸಮಿತಿ ರಚಿಸಲಾಗುವುದು ಹಾಗೂ ಸಮಿತಿಯು ಸಲ್ಲಿಸುವ ವರದಿಯ ನಂತರ ತೀರ್ಮಾನಿಸಲಾಗುವುದೆಂದು ಮಾನ್ಯ ಕುಲಪತಿಯವರು ತಿಳಿಸಿದರು.

3) ಡಾ. ಚೈತ್ರ ನಾರಾಯಣ ಅವರು ಮಾತನಾಡಿ, ಪ್ರತಿ ವರ್ಷವು ವಿದ್ಯಾರ್ಥಿಗಳಿಗೆ ದತ್ತಿಯನ್ನು ನೀಡಬೇಕಾದರೆ, ವಿದ್ಯಾರ್ಥಿಗಳಿಂದ ವ್ಯತ್ಯಾಸದ ಹಣವನ್ನು ಪಾವತಿಸಿಕೊಳ್ಳುತ್ತಾರೆ. ಇದರ ಬದಲು ದಾನಿಗಳನ್ನು ಸಂಪರ್ಕಿಸಿ ಅವರಿಂದಲೇ ಏನಾದರೂ ವ್ಯತ್ಯಾಸದ ಹಣವನ್ನು ಪಾವತಿಸಲು ಕೋರಬಹುದೆಂದು ಸಲಹೆ ನೀಡಿದರು.

ಇದಕ್ಕೆ ಸಂಬಂಧಿಸಿದ ದಾಖಲಾತಿ ಮತ್ತು ಸಂಪೂರ್ಣ ದತ್ತಿಗಳ ವ್ಯತ್ಯಾಸದ ಮೊತ್ತವನ್ನು ವಿವರವಾದ ಪಟ್ಟಿಯೊಂದಿಗೆ ನೀಡಬೇಕೆಂದು ಮಾನ್ಯ ಕುಲಪತಿಯವರು ಕುಲಸಚಿವ (ಪರೀಕ್ಷಾಂಗ)ರವರಿಗೆ ತಿಳಿಸಿದರು.

4) ಸಂಶೋಧನಾ ಕೇಂದ್ರದ ಮಾನ್ಯತೆಗೆ ಸಂಬಂಧಿಸಿದಂತೆ ಒಂದು ಸಮಿತಿಯನ್ನು ರಚಿಸುವುದು. ಇನ್ನು ಮುಂದೆ ಸಂಶೋಧನಾ ಕೇಂದ್ರಕ್ಕೆ ಮಾನ್ಯತೆ ನೀಡುವ ಮೊದಲು ಮೂಲಭೂತ ಸೌಕರ್ಯಗಳೊಂದಿಗೆ ಸಂಶೋಧನೆಗೆ ಪೂರಕವಾದ ಗುಣಮಟ್ಟವನ್ನು ಪರಿಶೀಲಿಸಿದ ನಂತರ ಮಾನ್ಯತೆ ನೀಡಲು ಸಭೆಯಲ್ಲಿ ನಿರ್ಧರಿಸಲಾಯಿತು.

5) ಪ್ರೊ. ಜಿ.ವೆಂಕಟೇಶ್‌ಕುಮಾರ್ ಅವರು ಮಾತನಾಡಿ, ಯಾವುದೇ ಕಾಲೇಜಿನಲ್ಲಿ 05 ಕ್ಕಿಂತ ಹೆಚ್ಚು ವಿದ್ಯಾರ್ಥಿಗಳು ಪರೀಕ್ಷಾ ಅಕ್ರಮ ಹಾಗೂ ಲೋಪದೋಷಗಳು ಕಂಡು ಬಂದರೆ, ಅಂತಹ ಕಾಲೇಜಿಗೆ ಮೂರು ವರ್ಷಗಳ ಕಾಲ ಪರೀಕ್ಷಾ ಕೇಂದ್ರವನ್ನು ನೀಡದಿರಲು ಕ್ರಮ ತೆಗೆದುಕೊಳ್ಳಬೇಕೆಂದು ಕೋರಿದರು.

6) ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿರುವ ಮಾನಸಗಂಗೋತ್ರಿಯ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡದ ಉಸ್ತುವಾರಿ ನೋಡಿಕೊಳ್ಳಲು ಒಂದು ಸಮಿತಿ ರಚಿಸುವುದು.

7) ಶ್ರೀ ಎಸ್.ಡಿ.ದೊಡ್ಡಚಾರಿ ಅವರು ಮಾತನಾಡಿ, ಶ್ರೀ ಟಿ.ಸಿ.ನಾರಾಯಣ, ಪ್ರಥಮ ದರ್ಜೆ ಗುಮಾಸ್ತರು, ಆಡಳಿತಾಧಿಕಾರಿಗಳ ಕಛೇರಿ, ಮಾನಸಗಂಗೋತ್ರಿ, ಮೈಸೂರು ಇವರಿಗೆ ಸಂಖ್ಯಾತಿರಿಕ್ತ ಹುದ್ದೆಯನ್ನು ಸೃಜಿಸಿದ ಮೇಲೆ ಒಟ್ಟು 04 ಉದ್ಯೋಗಿಗಳು ವಯೋನಿವೃತ್ತಿ ಹೊಂದಿದ್ದು, ಇವರ ಹುದ್ದೆಗೆ ಎದುರಾಗಿ 04 ಮಂದಿ ಉದ್ಯೋಗಿಗಳಿಗೆ ಪದೋನ್ನತಿ ನೀಡಲಾಗಿದೆ. ಆದರೆ, ಸದರಿ ಉದ್ಯೋಗಿಗೆ ಇದುವರೆವಿಗೂ ಪದೋನ್ನತಿ ನೀಡಿರುವುದಿಲ್ಲ. ಶ್ರೀ ಟಿ.ಸಿ.ನಾರಾಯಣ ಅವರಿಗೆ ಈ ಮಾಹೆಯಲ್ಲಿ ವಯೋನಿವೃತ್ತಿ ಹೊಂದುವ ಹುದ್ದೆಗೆ ಪದೋನ್ನತಿ ನೀಡಬೇಕು ಅಥವಾ 2017ರಲ್ಲಿ ಹೊರಡಿಸಲಾಗಿರುವ ಆದೇಶವನ್ನು ಹಿಂಪಡೆಯಬೇಕೆಂದು ಸಭೆಯಲ್ಲಿ ಆಗ್ರಹಿಸಿದರು.

ಈ ಸಂಬಂಧ ಮಾನ್ಯ ಕುಲಪತಿಯವರು ಮಾತನಾಡಿ, ಈ ತಿಂಗಳ ಅಂತ್ಯಕ್ಕೆ ನಿವೃತ್ತಿಯಾಗುವ ಉದ್ಯೋಗಿಯಿಂದ ಲಭಿಸಬಹುದಾದ ಖಾಲಿ ಹುದ್ದೆಗೆ ಎದುರಾಗಿ ಇವರನ್ನು ಅಫಿಶಿಯೇಟಿಂಗ್ ಆಧಾರದ ಮೇಲೆ ಪದೋನ್ನತಿ ನೀಡಲಾಗುವುದೆಂದು ತಿಳಿಸಿದರು.

ಅಂತಿಮವಾಗಿ ಮಾನ್ಯ ಕುಲಸಚಿವರು ಸಭೆಯಲ್ಲಿ ಮುಕ್ತವಾಗಿ ಚರ್ಚಿಸಿ, ಸೂಕ್ತ ನಿರ್ಣಯಗಳನ್ನು ತೆಗೆದುಕೊಳ್ಳಲು ಸಹಕರಿಸಿದ ಎಲ್ಲಾ ಸದಸ್ಯರುಗಳಿಗೆ ವಂದನೆಗಳನ್ನರ್ಪಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಹಾಗೂ ಸದಸ್ಯ ಕಾರ್ಯದರ್ಶಿ

ಕುಲಪತಿಗಳು ಹಾಗೂ ಅಧ್ಯಕ್ಷರು